ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 | ಸಂಚಿಕೆ 39 | ಸೆಪ್ಟೆಂಬರ್ 23, 1984 | ಬೆಲೆ 60 ಪೈಸೆ

ಲೋಕಸಭೆ ಚುನಾವಣೆಗೆ ಸಿದ್ಧತೆ

ಸಿ. ಪಿ. ಐ. (ಎಂ) ಕರ್ನಾಟಕ ರಾಜ್ಯ ಸಮಿತಿಯ ಸಭೆ, ಸಿ. ಪಿ. ಐ. (ಎಂ) ಪ್ರಧಾನ ಕಾರ್ಯದರ್ಶಿ ಇ. ಎಂ. ಎಸ್. ನಂಬೂದಿರಿಪಾದ್ ಅವರ ಮಾರ್ಗದರ್ಶನದಲ್ಲಿ ಸೆ. 12-13 ರಂದು ಬೆಂಗಳೂರಿನಲ್ಲಿ ಸಭೆ ಸೇರಿತ್ತು. ಅಂತ ರಾಷ್ಟ್ರೀಯ/ರಾಷ್ಟ್ರೀಯ ಪರಿಸ್ಥಿತಿ ಕುರಿತು ಇ. ಎಂ. ಎಸ್. ಅವರು ವರದಿ ಮಾಡಿದರು. (ಪ್ರತ್ಯೇಕ ಕೊಡಲಾಗಿದೆ). ಅದರ ಹಿನ್ನೆಲೆಯಲ್ಲಿ ಈ ವರ್ಷದ ಕೊನೆಯಲ್ಲಿ ಜರುಗಲಿರುವ ಲೋಕ ಸಭೆ ಚುನಾವಣೆಯಲ್ಲಿ ಪಾರ್ಟಿಯ ನಿಲುವು, ಪಾರ್ಟಿ ಅನುಸರಿಸಬೇಕಾದ ತಂತ್ರಗಳ ಕುರಿತು ವಿವರಿಸಿದರು.

ಈ ಚುನಾವಣೆಯಲ್ಲಿ ನಮ್ಮ ಪಾರ್ಟಿಯ ಮುಖ್ಯ ಧ್ಯೇಯಗಳು ಮೂರು. 1) ಇಂದಿರಾ ಕಾಂಗ್ರೆಸ್ಸನ್ನು ಸೋಲಿಸುವುದು. 2) ಛಿದ್ರಕಾರಿ ಮತ್ತು ಜಾತೀಯ ಶಕ್ತಿಗಳನ್ನು (ಅಂದರೆ ಆರ್. ಎಸ್. ಎಸ್. ನೇತೃತ್ವದ ಬಿ.ಜೆ.ಪಿ., ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗಿನ ಮುಖಂಡತ್ವದಲ್ಲಿರುವ ಅಖಿಲ ಭಾರತ ಮುಸ್ಲಿಂ ರಂಗ) ಸೋಲಿಸುವುದು. 3) ಎಡ ಮತ್ತು ಪುರೋಗಾಮಿ ವಿರೋಧ ಪಕ್ಷಗಳ ಬಲವನ್ನು ಲೋಕ ಸಭೆಯಲ್ಲಿ ಹೆಚ್ಚಿಸುವುದು.

ಈ ದಿಕ್ಸೂಚಿಗನುಸಾರವಾಗಿ ಕರ್ನಾಟಕ ರಾಜ್ಯದಲ್ಲಿ ಚುನಾವಣೆಯಲ್ಲಿ ಒಂದಾಗಿ ಸ್ಪರ್ಧಿಸುವ ಉದ್ದೇಶದಿಂದ ಜನತಾ ಪಕ್ಷ ಮತ್ತು ಭಾರತ ಕಮ್ಯೂನಿಸ್ಟ್ ಪಕ್ಷಗಳ ಜೊತೆಯಲ್ಲಿ, ಚರ್ಚೆ ಮಾಡಲು ಒಂದು ಉಪ ಸಮಿತಿ ನೇಮಿಸಲಾಯಿತು. ಆ ಉಪ ಸಮಿತಿಯಲ್ಲಿ ಪಿ. ರಾಮಚಂದ್ರ ರಾವ್, ಎಸ್. ಸೂರ್ಯ ನಾರಾಯಣ ರಾವ್, ಎನ್. ಕೆ. ಉಪಾಧ್ಯಾಯ, ವಿ.ಜೆ.ಕೆ. ನಾಯರ್, ಸಿ ನಂಜುಂಡಪ್ಪ ಎನ್. ಎಲ್. ಉಪಾಧ್ಯಾಯ ಮತ್ತು ಕೆ. ಆರ್. ಶ್ರೀಯಾನ್ ಅವರಿದ್ದಾರೆ.

ಜನತಾ ಮತ್ತು ಸಿ. ಪಿ. ಐ. ಜೊತೆಯಲ್ಲಿ ಮಾಡಿದ ಚರ್ಚೆಯ ವಿಷಯವನ್ನು ರಾಜ್ಯ ಸಮಿತಿಗೂ, ಕೇಂದ್ರ ಸಮಿತಿಗೂ ತಿಳಿಸಬೇಕೆಂದು, ಕೇಂದ್ರ ಸಮಿತಿಯ ನಿರ್ಣಯ ಒಪ್ಪತಕ್ಕದ್ದೆಂದೂ ನಿರ್ಣಯಿಸಲಾಯಿತು. ಜನತಾ ಪಕ್ಷ ಮತ್ತು ಸಿ. ಪಿ. ಐ. ಮುಖಂಡರಿಗೆ ಈ ವಿಷಯವನ್ನು ಪತ್ರ ಮುಖೇನ ತಿಳಿಸಲಾಗಿದೆ.

ಎನ್. ಟಿ. ಆರ್. ಸರಕಾರ ರಚನೆ

ಜನಶಕ್ತಿಯ ವಿಜಯ, ಸರ್ವಾಧಿಕಾರಕ್ಕೆ ಮುಖಭಂಗ

ಜನಶಕ್ತಿಯ ವಿಜಯವಾಗಿದೆ. ಜನತಾ ಆಂದೋಲನ ಗೆದ್ದಿದೆ. ವಿರೋಧ ಪಕ್ಷಗಳ ಐಕ್ಯ ಹೋರಾಟ ಯಶಸ್ವಿಯಾಗಿದೆ.

ಜನತೆಯ ಐಕ್ಯ ಹೋರಾಟ ಸೊಕ್ಕಿನ ಇಂದಿರನ ರೆಕ್ಕೆ ಮುರಿದು, ರಾಜ್ಯಪಾಲ ಶಂಕರ ದಯಾಳ್ ಶರ್ಮನ ತಲೆತಗ್ಗಿಸಿ ಅಲ್ಪ ಮತದಿಂದ ಕಾಯಿದೆ ವಿರುದ್ಧವಾಗಿ ಅಧಿಕಾರ ನಡೆಸುತ್ತಿದ್ದ ಭಾಸ್ಕರರಾವ್ ಮಂತ್ರಿ ಮಂಡಲದ ರಾಜೀನಾಮೆ ಕೊಡಿಸಿ ಎನ್.ಟಿ.ಆರ್. ಅವರನ್ನು ಸಂಪುಟ ರಚಿಸುವಂತೆ ಮಾಡಿದೆ. ರೈಲ್‌ರೋಕೋ ರಸ್ತೆರೋಕೋ ಚಳುವಳಿ ಹೂಡಿದರೆ, ಶಾಂತಿ ಭಂಗ ಉಂಟುಮಾಡಿದರೆ ಅದನ್ನು ಯಾವ ರೀತಿ ಎದುರಿಸಬೇಕೆಂದು ನನಗೆ ಗೊತ್ತಿದೆಂದು ಸೊಕ್ಕಿನಿಂದ ಮಾತಾಡಿದ ಭಾಸ್ಕರರಾವ್ 24 ಗಂಟೆಯೊಳಗಾಗಿ ತನ್ನ ದಮನಕಾರಿ ಆಜ್ಞೆಗಳ ಪ್ರತಿಗಳನ್ನು ಹೊತ್ತುಕೊಂಡು ಮನೆಸೇರಬೇಕಾಯಿತು. ಭಾಸ್ಕರರಾವ್ ಅಧಿಕಾರ ಬಿಟ್ಟು ಕೊಡುವ ತನಕ ಚಳುವಳಿ ಮುಂದುವರಿಯುವುದೆಂದು ವಿರೋಧ ಪಕ್ಷ ಒಕ್ಕೊರಲಿನ ಅಭಿಪ್ರಾಯ ಬಿತ್ತರಿಸಿದ ಎನ್. ಟಿ.ಆರ್. 24 ಗಂಟೆಯೊಳಗಾಗಿ ಮಂತ್ರಿಮಂಡಲ ರಚಿಸುವಂತೆ ಆದೇಶ ಪಡೆಯುವಂತಾಯಿತು.

ಸೆಪ್ಟೆಂಬರ್ 16 ರಂದು ಮತ್ತೆ ಅಧಿಕಾರ ಸ್ವೀಕರಿಸಿದ ಎನ್.ಟಿ ಆರ್ ಅವರು ತಮ್ಮ ಬಹುಮತ ಸಾಬೀತು ಪಡಿಸಲು ಒಂದು ತಿಂಗಳ ಕಾಲಾವಕಾಶವಿದ್ದರೂ ಕೂಡ ಸೆಪ್ಟೆಂಬರ್ 20 ರಂದೇ ವಿಧಾನ ಸಭೆಯ ಅಧಿವೇಶನ ಕರೆದು ತಮ್ಮ ಬಹುಮತವನ್ನು ನಿರೂಪಿಸಿ ಭಾಸ್ಕರರಾವ್ ಮತ್ತು ಕಾಂಗ್ರೆಸ್ ಪಕ್ಷಗಳು ಮುಖಭಂಗ ಹೊಂದುವಂತೆ ಮಾಡಿದ್ದಾರೆ. ಹೊಸ ಸ್ಪೀಕರ್ ಆಗಿ ತೆಲುಗು ದೇಶಂ ಪಕ್ಷದ ಶ್ರೀ ವೆಂಕಟ ರತ್ನಂ ಅವರು ಆಯ್ಕೆಯಾಗಿದ್ದಾರೆ. ಇವರ ವಿರುದ್ಧ ಸ್ಪರ್ಧಿಸಿದ್ದ ಭಾಸ್ಕರ ರಾವ್ ಕಡೆಯ ಅಭ್ಯರ್ಥಿ ಕೇವಲ 9 ಮತಗಳಿಸಿ ಕರುಣಾಜನಕ ಸೋಲನ್ನು ಅನುಭವಿಸಿದ್ದಾರೆ.

ನಾಚಿಕೆಯಿಲ್ಲದೆ ರಾಜೀವಗಾಂಧಿ ತಾ॥ 15 ರಂದು ಬೆಂಗಳೂರಿನಲ್ಲಿ ಮಹಿಳೆಯರ ಮೇಳದಲ್ಲಿ ಉತ್ತರ ಕುಮಾರನ ಹಾಗೆ ಪೌರುಷ ಕೊಚ್ಚಿಕೊಂಡು ತಾನು-ತನ್ನಮ್ಮ ಸೇರಿ ಎನ್.ಟಿ.ಆರ್. ಸರಕಾರ ಉರುಳಿಸಿ ಭಾಸ್ಕರರಾವ್ ಸಂಪುಟ ರಚಿಸಿರುವುದನ್ನು ಸಮರ್ಥಿಸಿಕೊಂಡ 12 ಗಂಟೆಯೊಳಗಾಗಿ ತಮ್ಮ ನಿಲುವೆಯನ್ನು ಬದಲಾಯಿಸಬೇಕಾಗಿ ಬಂತು. ಇದೇ ತಿಂಗಳ 20 ರಂದು ಭಾರತ ಬಂದ್ ಆಚರಿಸಬೇಕೆಂಬ ಎಲ್ಲ ವಿರೋಧ ಪಕ್ಷಗಳ ನಿರ್ಣಯ, ವಿರೋಧ ಪಕ್ಷಗಳ ಕರೆಯ ಮೇರೆಗೆ ಆಂಧ್ರದಲ್ಲಿ ತಾ॥ 15 ರಂದು ನಡೆದ ಬಂದ್ ಕಾರ್ಯಕ್ರಮ ಈ ತಾಯಿ-ಮಗ ತಮ್ಮ ನಿಲುವು ಬದಲಿಸುವಂತೆ ಮಾಡಿದೆ.

ಆಂಧ್ರದ ಕಾಂಗ್ರೆಸ್ ಶಾಸಕಾಂಗ ಪಕ್ಷ ಭಾಸ್ಕರರಾವಗಿತ್ತ ಬೆಂಬಲ ವಾಪಸ್ ಪಡೆಯ ಬಹುದೆಂಬ ಸಂಶಯ ಹರಡುತ್ತಿರುವಾಗಲೇ, "ಇಲ್ಲ ನಾವು ಅವರಿಗೇ ಬೆಂಬಲ ಕೊಡುವವರು" ಎಂಬ ನಿರ್ಣಯ ಪಾಸಾದ ಒಂದೇ ದಿವಸದಲ್ಲಿ ತಮ್ಮ ಬೆಂಬಲ ಪಡೆಯಲು ಭಾಸ್ಕರ ರಾವ್ ಇಲ್ಲೆಂಬ ಸುದ್ದಿ ಕೇಳಿ ಆಂಧ್ರದ ಕಾಂಗ್ರೆಸ್ ಶಾಸಕರು ಕಣ್ಣೀರಿಡುವಂತಾಗಿದೆ.

ತೆಲುಗುದೇಶ ಪಕ್ಷದಲ್ಲುಂಟಾದ ಒಡಕಿನಿಂದ ಎನ್‌ಟಿಆರ್ ಸರಕಾರ ಉರುಳಿದ್ದಲ್ಲದೆ ಕೇಂದ್ರ ಸರಕಾರದ ಕಾಂಗ್ರೆಸ್ ಪಕ್ಷದ ಕೈವಾಡವಿಲ್ಲೆಂದು ಇಂದಿರಾ ರಾಜೀವ ಗಾಂಧಿಗಳು ಪದೇ ಪದೇ, ಹೇಳುತ್ತ ಬಂದಿರುವುದು ಅಪ್ಪಟ ಸುಳ್ಳು ಎಂಬುದಕ್ಕೆ ಇತ್ತೀಚೆಗೆ ಘಟಿಸಿದ ಘಟನೆಗಳೇ ಸಾಕ್ಷಿ. ರವಿವಾರ ರಾಜ್ಯಪಾಲ ಶರ್ಮಾ ಭಾಸ್ಕರರಾವ್ ರಾಜೀನಾಮೆ ಕೊಡಬೇಕೆಂದು ಒತ್ತಾಯ ಪಡಿಸಿದ್ದನ್ನು ಅವರು ಪ್ರತಿಭಟಿಸಿರುವುದನ್ನು ನೋಡುವಾಗ ಇಂದಿರಾಗಾಂಧಿ ಭಾಸ್ಕರರಾವ್ ಅವರನ್ನು ತನ್ನ ಆಟದ ಗೊಂಬೆಯನ್ನಾಗಿ ಮಾಡಿಕೊಂಡಿದ್ದರೆಂಬುದಕ್ಕೆ ಬೇರೆ ಸಾಕ್ಷಿಯೇ ಅನಗತ್ಯವಾದಂತಾಗಿದೆ.

ಜನತೆಯ ಐಕ್ಯ ಹೋರಾಟ-ಜನಾಭಿಪ್ರಾಯದ ಮುಂದೆ ಎಂಥ ಕುತಂತ್ರವೂ ತಾಳಲಾರದೆಂಬುದನ್ನು ಆಂಧ್ರದ ಘಟನೆ ತೋರಿಸಿಕೊಟ್ಟಿದೆ. ಈ ಘಟನೆ ಮತ್ತೊಂದು ಮಹತ್ವದ ವಿಷಯದ ಕಡೆಗೂ ಜನರ-ವಿರೋಧ ಪಕ್ಷಗಳ ಗಮನ ಸೆಳೆದಿದೆ. ಬೇರೆ ಬೇರೆ ವಿರೋಧ ಪಕ್ಷಗಳೊಳಗೆ ರಾಜಕೀಯ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದರೂ ಕೂಡ ಸರ್ವಾಧಿಕಾರದ ವಿರುದ್ಧ, ಪ್ರಜಾಪ್ರಭುತ್ವದ ರಕ್ಷಣೆಯ ಸಲುವಾಗಿ, ಅಥವಾ ಇಡೀ ದೇಶದ ಜನತೆ ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆಗಳ ಕುರಿತು ಅಂದರೆ ಕೆಲವು ನಿರ್ದಿಷ್ಟ ಪ್ರಶ್ನೆಗಳ ವಿಷಯದಲ್ಲಿ ಎಲ್ಲ ಪಕ್ಷಗಳು ಸೇರಿ ಐಕ್ಯ ಹೋರಾಟ ನಡೆಸಲು ಸಾಧ್ಯವಿದೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹೇಳುತ್ತ ಬಂದಿದೆ. ಆಂಧ್ರದ ಎನ್‌ಟಿಆರ್ ಸರಕಾರ ವಿಸರ್ಜನೆಯ ವಿರುದ್ಧ "ಪ್ರಜಾಪ್ರಭುತ್ವ ಉಳಿಸಿರಿ" ಚಳುವಳಿಗೆ ದೊರೆತ ಬೆಂಬಲ ಮತ್ತು ಯಶಸ್ವಿ ಸಿಪಿಐ (ಎಂ) ನ ಆ ನಿಲುವೆಯನ್ನು ಸಮರ್ಥಿಸಿದೆ. ವಿರೋಧ ಪಕ್ಷಗಳು ಈ ವಿಷಯವನ್ನು ಗಮನಿಸುವುದು ಅತ್ಯಗತ್ಯ. ಮುಂಬರುವ ಲೋಕ ಸಭೆಯ ಚುನಾವಣೆಯಲ್ಲಿಯೂ ಇಂಥದ್ದೇ 'ತಂತ್ರ' ಉಪಯೋಗಿಸಿದರೆ ಇಂದಿರಾಗಾಂಧಿಯನ್ನು ಸಂಪೂರ್ಣ ಸೋಲಿಸುವುದೇನೂ ಕಷ್ಟಕರವಾಗಲಾರದೆಂಬುದನ್ನೂ, ಸಿಪಿಐ (ಎಂ) ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ನಂಬೂದಿರಿಪಾದ್ ಅವರು ಬೆಂಗಳೂರಿನ ಸಾರ್ವಜನಿಕ ಸಭೆಯಲ್ಲಿ ಹೇಳಿರುವುದು ಗಮನಾರ್ಹ, "ವಿರೋಧ ಪಕ್ಷಗಳೆಲ್ಲ ಒಂದಾಗಿ ಹೋರಾಡಿದರೆ ಕಾಂಗ್ರೆಸ್ ಸೊನ್ನೆಯಾಗುತ್ತದೆ" ಎಂದು ಇ.ಎಂ.ಎಸ್. ಹೇಳಿದ್ದರು. ಅವರು ತಾ॥ 12 ರಂದು ವ್ಯಕ್ತ ಮಾಡಿದ ಅಭಿಪ್ರಾಯ ತಾ॥ 16 ರಂದು ಖರೆಯಾಗಿ ಬೆಳಕು ಕಂಡಿದೆ.

1977 ರಲ್ಲಿ ಜನತೆ ಇಂದಿರಾ ಕಾಂಗ್ರೆಸ್ಸನ್ನು ಸೋಲಿಸುತ್ತ. ಜನತಾ ಮುಖಂಡರಲ್ಲಿದ್ದ ಅಧಿಕಾರ ಲಾಲಸೆ, ಗುಂಪುಗಾರಿಗೆ, ಆರ್‌ಎಸ್‌ಎಸ್ ರಾಜಕಾರಣಗಳಿಂದಾಗಿ 1979 ರಲ್ಲಿ ಸರಕಾರ ಪತನವಾಯಿತು. ಕಾಂಗ್ರೆಸ್, ಜನತಾ, ಲೋಕದಳ ಅಥವಾ ಎನ್.ಟಿ.ಆರ್. ತೆಲುಗು ದೇಶಂ – ಹೀಗೆ ಯಾವದೇ ಬಂಡವಾಳಶಾಹಿ ಪಕ್ಷವಿರಲಿ, ಅಂಥ ಪಕ್ಷಗಳಿಂದ ಆರಿಸಿ ಬರುವ ಶಾಸಕರು ಪಕ್ಷಕ್ಕೆ, ಪಕ್ಷದ ಕಾರ್ಯಕ್ರಮ ಸಿದ್ಧಾಂತಕ್ಕೆ ಬದ್ಧರಾಗದೆ. ಅಧಿಕಾರ ಹಣಗಳಿಗೆ ಬಲಿಯಾಗುತ್ತಿದ್ದಾರೆಂಬುದನ್ನು ಭಾರತದ ಲೋಕಶಾಹಿ ತೋರಿಸಿದೆ. ಅದೇ ಸಮಯದಲ್ಲಿ ಎಡ ರಂಗದಿಂದ ಆರಿಸಿ ಬಂದವರು ಯಾವದೇ ಆಮಿಷಕ್ಕೆ ಬಲಿಯಾಗುತ್ತಿಲ್ಲೆಂಬುದನ್ನೂ ಪಶ್ಚಿಮ ಬಂಗಾಲ, ತ್ರಿಪುರಗಳು ತೋರಿಸಿ ಕೊಟ್ಟಿವೆ.

ಎನ್ ಟಿ.ಆರ್ ಸರಕಾರ ಪುನರಪಿ ರಚಿತವಾಯಿತು ನಿಜ. ಆದರೆ ಅವರ ಪಕ್ಷದ ಶಾಸಕರು ಆಸೆ-ಆಮಿಷಕ್ಕೆ ಬಲಿಯಾಗಲಾರರೆಂದು ಹೇಳಲಿಕ್ಕೆ ಅವರು ಎಡಪಕ್ಷಗಳ ಉಮೇದುವಾರರಲ್ಲ. ಅವರು ಪಕ್ಷಾಂತರಗೊಂಡು ಎನ್ ಟಿ. ಆರ್. ಸರಕಾರ ಉರುಳಿಸಲಾರರೆಂಬ ಆಶ್ವಾಸನೆ ಕೊಡುವುದು ಸಾಧ್ಯವಿಲ್ಲ. ಆದರೆ ಎನ್.ಟಿ.ಆರ್. ಶಾಸಕರ ಬೆಂಬಲಾರ್ಥವಾಗಿ ಇಡೀ ದೇಶದ ಜನತೆ, ಅದರಲ್ಲೂ ಆಂಧ್ರದ ಜನತೆ, ಕರ್ನಾಟಕ, ತ್ರಿಪುರಾ, ಪಶ್ಚಿಮ ಬಂಗಾಲದ ಸರಕಾರಗಳೂ ಹೋರಾಡಿ ನಮ್ಮ ದೇಶ ಸ್ವಾತಂತ್ರ್ಯ ಪಡೆದ ನಂತರ ಪ್ರಜಾಪ್ರಭುತ್ವ ಹಕ್ಕಿಗಾಗಿ ನಡೆದ ಹೋರಾಟದಲ್ಲಿ ಪ್ರಥಮ ಸಲ ಜಯಗಳಿಸಿ, ಸರ್ವಾಧಿಕಾರಿ ಶಕ್ತಿಗೆ, ಪ್ರಜಾಪ್ರಭುತ್ವದ ಕೊಲೆಗಾರರ ಮುಖಕ್ಕೆ ಮಸಿ ಬಳಿದಿದೆ. ಇಂದಿರಾ ಗಾಂಧಿಯಂಥ ಮಹಾ ಶಕ್ತಿಯನ್ನೆದುರಿಸಿ ಅದನ್ನು ಮಣಿಸಿದ ಅದ್ಭುತ ಜನಶಕ್ತಿ, ನಾಳೆ ತಾವು ಎನ್‌ಟಿಆರ್‌ಗೆ ಮೋಸ ಮಾಡಿದರೆ ತಮ್ಮನ್ನು ಕ್ಷಮಿಸಲಾರದು

(8ನೇ ಪುಟ ನೋಡಿ)

— ಎನ್ಕೆ

ಕರ್ನಾಟಕ ರಾಜ್ಯದಲ್ಲಿ

ಭಯತಪ್ಪಿಲ್ಲ ! ಎಚ್ಚರಿಕೆ !

ಆಂಧ್ರದ ಎನ್.ಟಿ.ಆರ್. ಸರ್ಕಾರದ ವಿಸರ್ಜನೆಯ ವಿರುದ್ಧ ದೇಶಾದ್ಯಂತ ನಡೆದ ಜನರ ಆಂದೋಲನ, ಇಂದಿರಾ ಗಾಂಧಿಯ ಪ್ರಜಾಪ್ರಭುತ್ವ ವಿರೋಧಿ ಕೃತಿಯ ಖಂಡನೆಗಳಿಂದಾಗಿ ಹೆಗಡೆ ಸರಕಾರಕ್ಕೆ ಜೀವದಾನ ದೊರಕಿದಂತಾಗಿದೆ. ಇಂದಿರಾ ಕೈಚಳಕದ ಭೀತಿ ಹೆಗಡೆಯವರಿಗಿಲ್ಲೆಂದು ಬಹುಮಂದಿ ನಿಶ್ಚಿಂತರಾಗಿರಬೇಕು. ಅಂಥ ತಿಳುವಳಿಕೆ ತಪ್ಪು, ಜನತಾ ಸರಕಾರದ ಮೇಲೆ ಇಂದಿರಾ ಖಡ್ಗ ನೇತಾಡುತ್ತಲೇ ಇದೆಯೆಂಬುದನ್ನು ಮರೆಯ ಬಾರದು. ಪಶ್ಚಿಮ ಬಂಗಾಳದ ಎಡರಂಗ ಸರಕಾರದ ಮುಖ್ಯ ಮಂತ್ರಿ ಜ್ಯೋತಿ ಬಸು ಅವರು ಈಗಾಗಲೇ ಅಂಥ ಎಚ್ಚರಿಕೆ ನೀಡಿದ್ದಾರೆ.

ಅಧಿಕಾರ ಮತ್ತು ಜಾತಿಯೇ ತಮ್ಮ ಜೀವನದ ಗುರಿಯೆಂದು ಭಾವಿಸಿರುವ ಬಂಡವಾಳ ಶಾಹಿ ಪಕ್ಷಗಳ ಶಾಸಕರಿಗೆ, ಮುಖಂಡರಿಗೆ ಜನಾಭಿಪ್ರಾಯದ, ಸಾಮಾಜಿಕ ನೀತಿಯ ಭಯವಿಲ್ಲೆಂಬುದನ್ನು ತಿಳಿಯಬೇಕು. ಹೆಗಡೆ ಸರಕಾರವನ್ನುರುಳಿಸುವ ಅಭೀಪ್ಸೆಯನ್ನಿನ್ನೂ ಇಂದಿರಾ ಗಾಂಧಿ ಬಿಟ್ಟಿಲ್ಲ. ಖೂನು ಹಿಡಿಯುವ ಕಾರ್ಯವನ್ನು ಮುಂದುವರಿಸಿಯೇ ಇದ್ದಾರೆ. ಬಂಗಾರಪ್ಪನವರಿಂದ ಸಾಧಿಸಲಾರದ್ದನ್ನು ಶಾಸನಸಭೆಯ ಸ್ಪೀಕರ್ ಆದ ಚಂದ್ರೇಗೌಡರಿಂದ ಸಾಧಿಸಬೇಕೆಂಬ ಆಕಾಂಕ್ಷೆಯನ್ನು ಇಂದಿರಾ ಗಾಂಧಿ ಹೊಂದಿದಂತಿದೆ. ತನಗೆ ಮಂತ್ರಿ ಸ್ಥಾನ ಸಿಗಲಿಲ್ಲೆಂದು ಚಂದ್ರೇಗೌಡರು ಒಳಗಿಂದೊಳಗೆ ಕೊರಗುತ್ತಲೇ ಇದ್ದಾರೆ. ಗೌಡರ ಗೋಡೆ ಕುಸಿಯುತ್ತಿರುವುದನ್ನು ಕಂಡ ಇಂದಿರಾ ಅವರ ಸಹಾಯಕ್ಕೆ ಧಾವಿಸಿದ್ದಾರಂತೆ. ಗೌಡರು ಅಪ್ಪಿಕೊಳ್ಳಲು ಎರಡೂ ಕೈ ಮುಂದೆ ಮಾಡಿದ್ದಾರಂತೆ ? ಎನ್.ಟಿ.ಆರ್. ಅಮೇರಿಕಕ್ಕೆ ಹೋದಾಗ ಇಂದಿರಾ ಗಾಂಧಿ ಮೇಡಕ್‌ನಲ್ಲಿ ಮೇಳ ನಡೆಸಿ ಗಾಳದಲ್ಲಿ ಭಾಸ್ಕರ ರಾವ್ ಅವರನ್ನು ಹಾಕಿಕೊಂಡಿದ್ದರು. ಇದೇ ತಿಂಗಳು 15-16 ರಂದು ಮಹಿಳಾ ಸಮ್ಮೇಳನ, ಇಂಟಕ್ ಸಮಾವೇಶಗಳಲ್ಲಿ ತಾಯಿ-ಮಗ ಇಬ್ಬರೂ ಪಾಲ್ಗೊಳ್ಳಲಿದ್ದಾರೆ. ಪ್ರಣಬ ಮುಖರ್ಜಿ, ಅಂತೋನಿ, ಕರುಣಾಕರ ಮೊದಲಾದವರೆಲ್ಲ ನಾಲ್ಕು ದಿವಸ ಮುಂಚೆಯೇ ಬೆಂಗಳೂರಿನಲ್ಲಿ ಲಗ್ಗೆ ಹೊಡೆಯುತ್ತಾರಂತೆ. ಮಹಿಳೆಯ ಸಮ್ಮೇಳನದ ಜೊತೆಯಲ್ಲೇ ಸಮ್ಮಿಲನಕ್ಕೂ ತಂತ್ರ ಹೂಡಲಾಗುತ್ತಿದೆಂದು ದಟ್ಟ ವಾರ್ತೆ. ಕಾರಣ ಜನತಾ ಪಕ್ಷ ಹಾಗೂ ಜನತೆ ಎಚ್ಚರದಿಂದಿರಲೇ ಬೇಕು.

ಅಜೀಜ ಶೇಠರು ಜನತಾಕ್ಕೆ?

ಅಲ್ಪ ಭಾಷಿಕರಿಗೆ ಮತ್ತು ಹಿಂದುಳಿದವರಿಗೆ ಜನತಾ ಸರಕಾರದಿಂದ ನ್ಯಾಯ ದೊರಕುತ್ತಿಲ್ಲೆಂದು ಹೇಳಿ ಮಂತ್ರಿ ಪದಕ್ಕೂ ಜನತಾ ಪಕ್ಷದ ಸದಸ್ಯತ್ವಕ್ಕೂ ರಾಜೀನಾಮೆ ಕೊಟ್ಟ ಅಜೀಜ ಶೇಠರು ಮತ್ತೆ ಜನತಾ ಪಕ್ಷದ ಆಶ್ರಯ ಪಡೆಯುತ್ತಾರೆಂಬ ದಟ್ಟ ವಾರ್ತೆ ಹಬ್ಬಿದೆ. ಅಜೀಜ ಶೇಠ ಮತ್ತು ಚಂದ್ರ ಪ್ರಭಾ ರಾಜೀನಾಮೆ ಕೊಟ್ಟಾಗ ಜನರು ಅವರನ್ನು ಸ್ವಾಗತಿಸಲಿಲ್ಲ. ಖಂಡಿಸಿದರು. ಕಾಂಗ್ರೆಸ್ಸಿನವರೂ ಬಾಯಿ ಅನ್ನಲಿಲ್ಲ. ಅಲ್ಪ ಭಾಷಿಕರೂ, ಹಿಂದುಳಿದವರೂ ಇವರಿಬ್ಬರ ರಾಜೀನಾಮೆಯಿಂದಾಗಿ ಕುಣಿದಾಡಲಿಲ್ಲ. ಕಾಂಗ್ರೆ ಟಿಕೇಟಿನಿಂದ ಲೋಕ ಸಭೆಗೆ ಸ್ಪರ್ಧಿಸಬೇಕೆಂಬ ಅಭಿಲಾಷೆಗೆ ಕಾಂಗ್ರೆ ತಣ್ಣೀರೆರಚಿದೆ. ಯಾಕೆಂದರೆ ಅಜೀಜ ಶೇಠರಿಂದ ತಮ್ಮ ಬೇಳೆ ಬೇಯಿಸುವಷ್ಟು ಶಕ್ತಿಯಿಲ್ಲೆಂಬುದು ಖಾತ್ರಿಯಾಗಿದೆ. ಆದ್ದರಿಂದ ಶೇಠರು ಮತ್ತೆ ಜನತಾಕ್ಕೆ ನುಸುಳಿ ಬರಲು ಪ್ರಯತ್ನ ನಡೆಸಿದ್ದಾರಂತೆ. ಇವರಿಗಾಗಿ ಜನತಾ ಪಕ್ಷದ ಬಾಗಿಲು ತೆರೆದಿದೆಯೇ ?

ಎಫ್. ಎಂ. ಖಾನ್ ಸಂಜಯ ಮಂಚಕ್ಕೆ

ಅಜೀಜ ಶೇಠರಂತೆ ಎಫ್. ಎಂ. ಖಾನ್ ಅವರಿಗೂ ಭ್ರಮನಿರಸನವಾಗುತ್ತಿದೆಯಂತೆ. ಸಂಜಯ ಗಾಂಧಿಯ ಕಾಲದಲ್ಲಿ ಬೆಳಕು ಕಂಡು ರಾಜ್ಯ ಸಭೆ ಸದಸ್ಯರಾದ ಖಾನ ಸಾಹೇಬರು, ಇಂದಿರಾ-ರಾಜೀವರ ಹೊಸ ಒಡ್ಡೋಲಗದಲ್ಲಿ ಕುರ್ಚಿ ಸಿಗಲಾರದವರಾಗಿದ್ದಾರಂತೆ. ತುರ್ತು ಪರಿಸ್ಥಿತಿಯಲ್ಲಿ ಬೆನ್ನು ಕಟ್ಟಿದವರನ್ನು ಬಿಟ್ಟು ಇಂದಿರಾ ಗಾಂಧಿ ಹೊಸಬರಿಗೆ ಅಧಿಕಾರ ಸ್ಥಾನ ಕೊಡುತ್ತಿರುವುದನ್ನು ಖಂಡಿಸಿ, ತಮ್ಮಂಥವರ ಸಮಸ್ಯೆಯತ್ತ ಅಮ್ಮಾವ್ರ ಗಮನ ಸೆಳೆಯುವ ಸಲುವಾಗಿ ಎರಡು ತಾಸಿನ "ಉಪವಾಸ" ಕೈಕೊಂಡು, ದೇವಿಯ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗುವುದೆಂಬ ಆಶ್ವಾಸನೆ ಪಡೆದು ಮೂಸಂಬಿ ರಸ ಕುಡಿದರಂತೆ. ಖಾನ್‌ರಂಥವರು ಉಪವಾಸ ಕೈಗೊಳ್ಳುವ ಧೈರ್ಯ ತೋರಿಸಬೇಕಾದರೆ ಅವರು ಬೇರೆ ಆಶ್ರಯ ಪಡೆಯುವ ಹೊಂಚಿನಲ್ಲಿರಬೇಕೆಂದು ಸ್ಪಷ್ಟವಾಗುತ್ತದೆ.

ಇಂದಿರಾ ಗಾಂಧಿಯ ಹುಟ್ಟು ಗುಣವನ್ನು ಕಂಡೂ ಕಂಡೂ ಉಪವಾಸ ಮಾಡುವ ಧೈರ್ಯ ತೋರಿಸಿದ ಖಾನ್ ಅವರಿಗೆ ದೇಶದಲ್ಲಿ ಬಹಳಷ್ಟು ಲೋಕ ಸಭೆ ಸದಸ್ಯರ ಬೆಂಬಲವಿದೆಯಂತೆ. ಖಾನ್ ಅವರ ಕೃತಿಯನ್ನು ಬಹಳಷ್ಟು ಹಿರಿಯ ಕಾಂಗ್ರೆ ಮುಖಂಡರು ಖಂಡಿಸಿದ್ದಾರೆ. ಎಫ್. ಎಂ. ಖಾನ್ ಅವರೇ ಹೊಸಬರೆಂಬ ಆರೋಪವನ್ನು ಹಾವನೂರ್‌ರವರು ಮಾಡಿದ್ದಾರೆ.

ಇಂದಿರಾ ನೀತಿಯ ವಿರುದ್ಧ ದೇಶಾದ್ಯಂತ ಜನತೆ ಬಂಡೇಳುತ್ತಿರುವಾಗ ಖಾನ್‌ರಂತವರಿಗೂ ಧೈರ್ಯ ಬಂದಿರಬೇಕು. ತಮ್ಮ ಮುಖಂಡರನ್ನೆದುರು ಹಾಕಿಕೊಳ್ಳಲು, ಕರ್ನಾಟಕದಲ್ಲಿಯ ಹಲವಾರು ಕಾಂಗ್ರೆ ಮುಖಂಡರು ತಮ್ಮ ಭವಿಷ್ಯದ ಭದ್ರತೆಯ ದೃಷ್ಟಿಯಿಂದ ಖಾನರ ಜೊತೆ ಸೇರಿ ಮೇನಕಾ ಗಾಂಧಿಯ ಸಂಜಯ ವಿಚಾರ ಮಂಚ ಸೇರಬಹುದೆಂಬ ದಟ್ಟ ವಾರ್ತೆ ಹಬ್ಬಿದೆ. ಸಂಜಯಗಾಂಧಿಯ ಶಿಷ್ಯ ಗುಂಡೂರಾಯರ ಗತಿಯೇನೆಂಬುದು ಸ್ಪಷ್ಟವಾಗಿಲ್ಲ. ಅಂತೂ ಕರ್ನಾಟಕದಲ್ಲಿಯ ಹೆಗಡೆ ಸರಕಾರ ಉರುಳಿಸಿ ಗದ್ದುಗೆಯೇರಬೇಕೆಂಬ ಇಂದಿರಾ ಕಾಂಗ್ರೆಗಳ ಕನಸು ಖಾನ್ ಅವರ ಬಂಡಾಯದಿಂದ ನನಸಾಗುವುದು ತಪ್ಪುವಂತೆ ಕಂಡು ಬರುತ್ತಿದೆ. ಸಮಸ್ಯೆಗಳು ಪರಿಹಾರ ಕಾಣಲಾರದಂತಾದಾಗ ಜನರ ಚಳುವಳಿ ವಿಶಾಲವಾಗಿ ಬೆಳೆದು ಬರುತ್ತದೆ. ಅಂಥ ಸಂದರ್ಭದಲ್ಲಿ ಆಳುವ ಬಂಡವಾಳ ಶಾಹಿ ಪಕ್ಷದಲ್ಲಿಯೂ ಒಡಕುಂಟಾಗುತ್ತವೆ. ಮುಂಬರಲಿರುವ ಲೋಕ ಸಭಾ ಚುನಾವಣೆಯ ಈ ಸಂದರ್ಭದಲ್ಲಿ ಆಳುವ ಕಾಂಗ್ರೆ ಪಕ್ಷದಲ್ಲಿ ಒಡಕುಂಟಾದರೆ ಆಶ್ಚರ್ಯ ಪಡಬೇಕಾಗಿಲ್ಲ. ಆ ರೀತಿಯಾದರೆ ಅದನ್ನು ಸ್ವಾಗತಿಸಬೇಕು, ಸರ್ವಾಧಿಕಾರಿ ಶಕ್ತಿಯನ್ನು ಕುಗ್ಗಿಸಬೇಕು.

ಹೊಲಸು ಕೇರಿಗಳು

ಕರ್ನಾಟಕ ರಾಜ್ಯದಲ್ಲಿ ಅಧಿಕಾರಿಗಳ ಹೇಳಿಕೆಯಂತೆ 590 ಸ್ಲಮ್-ಹೊಲಸು ಕೇರಿಗಳಿವೆಯಂತೆ. ಇದಕ್ಕಿಂತಲೂ ಹೆಚ್ಚಿದೆಂದು ನಮ್ಮ ಲೆಕ್ಕ. ಇವುಗಳ ಪೈಕಿ 590 ಹೊಲಸು ಕೇರಿಗಳಲ್ಲಿ 5.47 ಲಕ್ಷ ಜನರಿದ್ದಾರಂತೆ.

ಸರಕಾರದ ಹೇಳಿಕೆ ಪ್ರಕಾರ 83-84 ರ 12 ತಿಂಗಳಲ್ಲಿ ಖರ್ಚು ಮಾಡಲು ರೂ 65 ಲಕ್ಷ ಮಂಜೂರಾಗಿದೆಯಂತೆ; ಜುಲೈ ತಿಂಗಳ ತನಕ ರೂ 13 ಲಕ್ಷ ಖರ್ಚಾಗಿದೆಯಂತೆ.

ನಮಗೆ ಬಂದ ವರದಿ ಪ್ರಕಾರ ಹಾಗೆಯೇ ಆ ಖಾತೆಯ ಅಧಿಕಾರಿಗಳ ಹೇಳಿಕೆಯಂತೆ ಹೊಲಸು ಕೇರಿಗಳ ಸುಧಾರಣಾ ಕಾರ್ಯ ಸಮಾಧಾನಕರವಾಗಿ ನಡೆದಿಲ್ಲ. ದಾಂಡೇಲಿ, ಬಿಜಾಪುರ, ಹುಬ್ಬಳ್ಳಿ-ಧಾರವಾಡ ಹಾಗೆಯೇ ರಾಜ್ಯದ ಬಹಳಷ್ಟು ಪ್ರದೇಶಗಳಲ್ಲಿಯ ಹೊಲಸು ಕೇರಿಗಳ ಸಮೀಕ್ಷೆ ನಡೆದು ಹಲವಾರು ವರ್ಷಗಳು ಗತಿಸಿದರೂ ಹೊಲಸು ಕೇರಿ ನಿವಾರಣ ಮಂಡಳಿ ಆಮೆ ವೇಗದಲ್ಲೇ ಮುಂದುವರಿದಿದೆ, ತನಗಾಗಿ ಮಂಜೂರಾದ ಹಣವನ್ನೂ ಖರ್ಚು ಮಾಡುತ್ತಿಲ್ಲೆಂದು ತಿಳಿದು ಬರುತ್ತದೆ. ಈ ಮಂಡಳಿಯ ಆಧೀನದಲ್ಲಿರುವ ಅಧಿಕಾರಿಗಳಿಂದ ಎಲ್ಲ ಕೆಲಸ ನೀಗಿಸಿಕೊಂಡು ಹೋಗಲು ಸಾಧ್ಯವಾಗುತ್ತಿಲ್ಲೆಂದೂ, ಹೆಚ್ಚು ತಂತ್ರಜ್ಞರನ್ನು ನೇಮಿಸಿಕೊಳ್ಳಲು ಅರ್ಥಶಾಖೆ ಅಪ್ಪಣೆ ಕೊಡುತ್ತಿಲ್ಲೆಂದೂ, ಹಾಗಾಗಿ ಯೋಜನೆಗಳ ಕಾರ್ಯ ಕುಂಠಿತವಾಗಿದೆಂಬೂ ಆರೋಪಿಸಲಾಗಿದೆ. ಸ್ಟೈಫೆಂಡರಿ, ನಿರುದ್ಯೋಗಿ ಇಂಜನಿಯರ ಮತ್ತಿತರ ಸಿಬ್ಬಂದಿಯನ್ನುಪಯೋಗಿಸಿಕೊಂಡು, ಲಕ್ಷಾವಧಿ ಜನರಿಗೆ ಸಂಬಂಧಪಟ್ಟ ಹೊಲಸುಕೇರಿ ಸುಧಾರಣೆಯ ಕೆಲಸ ತೀವ್ರ ಮುಗಿಸಲು ಶಕ್ಯವಿದೆ.

ತ್ವರಿತಗತಿಯಲ್ಲಿ ಕಾರ್ಯಮಾಡುವ ಪಶ್ಚಿಮ ಬಂಗಾಲದ ಎಡರಂಗ ಸರಕಾರಕ್ಕೆ ಹಣದ ಸಹಾಯವಿಲ್ಲ ಹೊಲಸು ಕೇರಿಯನ್ನು ತೆಗೆದು ಹಾಕಲು. ಹೆಗಡೆ ಸರಕಾರ ಸಾಕಷ್ಟು ಹಣವಿದ್ದರೂ ಕೂಡ ಆಡಳಿತೆಯಲ್ಲಿಯ ಆತಂಕದಿಂದಾಗಿ ಮೀಸಲಾಗಿಟ್ಟ ಹಣ ಖರ್ಚು ಮಾಡಲು ವಿಫಲವಾಗಿದೆ. ಎಂಥ ವೈಪರೀತ್ಯ.

ಪೂಜಾರಿಯವರಿಂದ ಮತಗಳ ಖರೀದಿ

ಕೇಂದ್ರದ ಅರ್ಥ ಮಂತ್ರಿ ಜನಾರ್ಧನ ಪೂಜಾರಿಯವರು ಲೋಕಸಭೆ ಚುನಾವಣೆಗೆ ಇನ್ನೂ ಕೆಲವು ತಿಂಗಳಿರುವಾಗಲೇ ಮತಗಳ ಖರೀದಿ ಪ್ರಾರಂಭಿಸಿದ್ದಾರೆ. ಬಡವರಿಗೆ ಸಾಲ ಹಂಚುವ ನೆಪದಲ್ಲಿ ಕಾಂಗ್ರೆಯ ಛೋಟಾ ಮುಖಂಡರೆಲ್ಲ ತಾವೇ ಅರ್ಜಿ ಫಾರಂಗಳನ್ನು ಛಾಪಿಸಿ, ತಾವೇ ತುಂಬಿ ಬ್ಯಾಂಕುಗಳಿಗೆ ಮುತ್ತಿಗೆ ಹಾಕುತ್ತಿದ್ದಾರೆಂದೂ, ಮಹಿಳೆಯರ, ಮಕ್ಕಳ ಮಾನ ಭಂಗ ಮಾಡುತ್ತಿದ್ದಾರೆಂದೂ ಅಧಿಕಾರಿಗಳ, ನೌಕರದಾರರ ಸಂಘಟನೆಗಳು ಆರೋಪ ಹೊರಿಸಿವೆ.

ಜನರ ಆರ್ಥಿಕ ಪರಿಸ್ಥಿತಿ ದೈನಂದಿನ ಹದಗೆಡುತ್ತಿದ್ದು, ಜೀವನ ಸಾಗಿಸಲು ಸಾಧ್ಯವಾಗದೆ ಕೇಂದ್ರ ಸರಕಾರದ ನೀತಿಯ ವಿರುದ್ಧ ಜನತೆ ಹೋರಾಡುತ್ತಿರುವಾಗ ಇಂದಿರಾ ಗಾಂಧಿಗೆ ಧಿಕ್ಕಾರ ಹಾಕುತ್ತಿರುವಾಗ, ಮುಂಬರುವ ಲೋಕಸಭೆ ಚುನಾವಣೆಯಲ್ಲಿ ತನಗೆ ಸೋಲುಂಟಾಗಬಹುದೆಂದು ಅಂಜಿ ಅರ್ಥ ಮಂತ್ರಿ ಪೂಜಾರಿಯವರು 20 ಅಂಶಗಳ ಕಾರ್ಯಕ್ರಮದ ನೆಪದಲ್ಲಿ ಕಳೆದ ವರ್ಷದಿಂದಲೇ ರಾಷ್ಟ್ರೀಕೃತ ಬ್ಯಾಂಕುಗಳ ಹಣವನ್ನು ಮನಬಂದಂತೆ ವಿತರಣೆ ಮಾಡುತ್ತಿದ್ದಾರೆ. ಆ ರೀತಿ ಹಣ ಪಡೆದವರು ತಿಂದು ತೇಗಿ ಮತ್ತೆ ಸಾಲದ ಅರ್ಜಿ ಮಂಡಿಸುತ್ತಿದ್ದಾರೆ. ಈ ರೀತಿಯಾದರೆ ದೇಶದ ಪರಿಸ್ಥಿತಿ ಹದಗೆಡುವುದರಲ್ಲಿ ಸಂಶಯವಿಲ್ಲ. ಹಣ ಹೂಡಿಕೆಗೆ ಪ್ರತಿಫಲ ದೊರಕಿದರೆ ಬ್ಯಾಂಕುಗಳು ತಮ್ಮ ಕರ್ತವ್ಯ ನಿರ್ವಹಿಸಲು ಸಾಧ್ಯ.

ಒಂದು ಕಡೆ ಟಾಟಾ-ಬಿರ್ಲಾರಂತ ಗುತ್ತೇದಾರಿ ಬಂಡವಲದಾರರು ತಮ್ಮ ಲಾಭ ಹೆಚ್ಚಿಸುವ ಸಲುವಾಗಿ ಬ್ಯಾಂಕುಗಳನ್ನು ಲೂಟಿ ಮಾಡುತ್ತಿದ್ದರೆ, ಮತ್ತೊಂದು ಕಡೆ ಮತಗಳಿಸಿ ಅಧಿಕಾರಕ್ಕೇರುವ ದುರುದ್ದೇಶದಿಂದ ಜನಾರ್ಧನ ಪೂಜಾರಿಯವರು ಸಾರ್ವಜನಿಕರು ಬ್ಯಾಂಕುಗಳಲ್ಲಿಟ್ಟಿರುವ ಹಣವನ್ನು ದಾನ ಮಾಡಿ ಮತಗಳಿಸುವ ತಂತ್ರ ಹೂಡಿದ್ದಾರೆ. ಬಡವರಿಗೆ ಬ್ಯಾಂಕಿನ ಹಣ ದೊರೆಯಬೇಕಾದ್ದು ನ್ಯಾಯವೇ ಸರಿ. ಆದರೆ ಜನಾರ್ಧನ ಪೂಜಾರಿಯವರ ಕ್ರಮ ದೇಶಘಾತುಕವಲ್ಲದೆ ಮತ್ತೇನಲ್ಲ.

★

ಬಂಡಾಯ ಸಭೆಯ ಮೇಲೆ ಹಲ್ಲೆಗೆ ಖಂಡನೆ.

ದ.ಕ. ಜಿಲ್ಲಾ ಬಂಡಾಯ ಸಾಹಿತ್ಯ ಸಂಘಟನೆಯವರು ತಾ; 9-9-84 ರಂದು ಉಡುಪಿಯಲ್ಲಿ ಏರ್ಪಡಿಸಿದ್ದ "ನಮ್ಮ ಭಾಷಾ ಪಠ್ಯ ಪುಸ್ತಕಗಳು"—ಎಂಬ ವಿಚಾರ ಸಂಕಿರಣದ ಸಮಯದಲ್ಲಿ ಹಲವು ಕೋಮುವಾದಿ ಹಾಗೂ ಗೂಂಡಾ ಶಕ್ತಿಗಳು ವ್ಯವಸ್ಥಿತವಾಗಿ ಸಭೆಗೆ ಬಂದು ಗೊಂದಲ ಎಬ್ಬಿಸಿ, ಸಭೆಯನ್ನು ನಡೆಸಲು ಬಿಡದೆ, ಅಂದಿನ ಸಭೆಯ ಅಧ್ಯಕ್ಷತೆ ವಹಿಸಿದ್ದ ಡಾ. ಪೊಲಂಕಿ ರಾಮಮೂರ್ತಿ ಸಹಿತ ಇತರರ ಮೇಲೆ ಹಲ್ಲೆ ನಡೆಸಲು ಪ್ರಯತ್ನಿಸಿದ್ದನ್ನು ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.) ದ.ಕ. ಜಿಲ್ಲಾ ಸಮಿತಿ ಖಂಡಿಸುತ್ತದೆ. ಇದು ವೈಚಾರಿಕ ಸ್ವಾತಂತ್ರ್ಯದ ಮೇಲೆ ನಡೆಸಿದ ಆಕ್ರಮಣವಾಗಿದ್ದು, ಇದನ್ನು ಪ್ರಜಾಪ್ರಭುತ್ವ ಶಕ್ತಿಗಳೆಲ್ಲಾ ಖಂಡಿಸಬೇಕೆಂದು ಎಸ್. ಎಫ್.ಐ. ಕರೆ ನೀಡಿದೆ. ಈ ಫಾಸಿಸ್ಟ್ ಶಕ್ತಿಗಳ ಗೂಂಡಾಗಿರಿ ವಾಕ್ ಸ್ವಾತಂತ್ರ್ಯದ ಮೇಲೆ ನಡೆದ ಹಲ್ಲೆಯಾಗಿದ್ದು, ಈ ರೀತಿ ಸಭೆ ನಡೆಸಲು ಬಿಡದೆ ಗೂಂಡಾಗಿರಿ ಮಾಡಿದವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಎಸ್ ಎಫ್.ಐ. ಒತ್ತಾಯಿಸುತ್ತದಲ್ಲದೆ, ಜಿಲ್ಲೆಯ ವಿದ್ಯಾರ್ಥಿಗಳೆಲ್ಲಾ ಈ ಅಮಾನುಷ ಕೃತ್ಯದ ವಿರುದ್ಧ ಜಾಗೃತರಾಗಬೇಕಲ್ಲದೆ ಇನ್ನು ಮುಂದೆ ಈ ರೀತಿಯ ಘಟನೆಯನ್ನು ನಡೆಸಲು ಬಿಡಬಾರದೆಂದು ಎಸ್.ಎಫ್.ಐ. ಮನವಿ ಮಾಡಿಕೊಂಡಿದೆ.

ಆರ್ಥಿಕ ಸಮೀಕ್ಷೆ :

ಚಿಲ್ಲರೆ ಹಣದ ಅಭಾವ - ಸರಕಾರದ ಹೊಣೆಗೇಡಿತನ

—ಆರ್. ಚಂದ್ರ

ಕೃತಕ ಚಿಲ್ಲರೆ ಅಭಾವ

ಸುಮಾರು ಒಂದು ವರ್ಷದಿಂದ ದೇಶಾದ್ಯಂತ ಜನ ಸಾಮಾನ್ಯರು ಚಿಲ್ಲರೆ ಹಣದ ತೀವ್ರ ಅಭಾವದಿಂದಾಗಿ ಅಪಾರ ಕಷ್ಟ ನಷ್ಟಗಳನ್ನು ಅನುಭವಿಸುತ್ತಿದ್ದಾರೆ. ಸಾಕಷ್ಟು ಪ್ರಮಾಣದಲ್ಲಿ ಚಿಲ್ಲರೆ ನಾಣ್ಯಗಳನ್ನೂ, ಸಣ್ಣ ಮೌಲ್ಯದ 1,2 ರೂಪಾಯಿ ನೋಟುಗಳನ್ನೂ ಮಾರು ಕಟ್ಟೆಗೆ ಸಾರ್ವತ್ರಿಕ ಚಲಾವಣೆಗೆ ರಿಸರ್ವ್ ಬ್ಯಾಂಕ್ ಇತ್ತೀಚೆಗೆ ಒದಗಿಸಲು ಸೋತಿರುವುದು ಕೇಂದ್ರ ಸರಕಾರದ ಹೊಣೆಗೇಡಿತನವೇ ಆಗಿದೆ. ಲೋಕ ಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ, ಚಿಲ್ಲರೆ ಹಣದ ಅಭಾವವನ್ನು ಇಂದಿರಾ ಸರಕಾರ ದುರುದ್ದೇಶದಿಂದಲೇ ಉಂಟು ಮಾಡಿದೆ ಎಂದೂ, ಇದರಿಂದ ಸಾಹುಕಾರರಿಗೆ ಅಕ್ರಮವಾಗಿ ಸುಲಭ ಲಾಭಗಿಟ್ಟಿಸಲು ಮತ್ತು ಇಂದಿರಾ ಕಾಂಗ್ರೆಸ್‌ನ ಚುನಾವಣೆ ಪ್ರಚಾರಕ್ಕೆ ಹಣ ಒದಗಿಸಲು ಅನುಕೂಲವಾಗುವುದೆಂದೂ ಪ. ಬಂಗಾಳದ ಎಡರಂಗ ಸರಕಾರದ ವಿತ್ತ ಮಂತ್ರಿ ಡಾ। ಅಶೋಕ ಮಿತ್ರ ಟೀಕಿಸಿದ್ದಾರೆ. ಚಿಲ್ಲರೆ ಅಭಾವದ ವಿರುದ್ಧ ಪಾರ್ಲಿಮೆಂಟ್‌ನಲ್ಲಿಯೂ ಬಿರುಸಿನ ಚರ್ಚೆಗಳು ನಡೆದಿದ್ದು, ಸರಕಾರದ ಹಾಗೂ ರಿಸರ್ವ್ ಬ್ಯಾಂಕಿನ ವತಿಯಿಂದ ಈ ಕೆಳಗಿನ ಅಂಕೆ ಸಂಖ್ಯೆಗಳು ಬೆಳಕಿಗೆ ಬಂದಿವೆ.

ಬೆಲೆ ಏರಿಕೆ : ಸಾರ್ವಜನಿಕರಲ್ಲಿ ಚಲಾವಣೆಯಲ್ಲಿರಬೇಕಾದ ನೋಟುಗಳ ಮೊತ್ತವನ್ನು ಕಳೆದ ನಾಲ್ಕು ತಿಂಗಳುಗಳ ಅವಧಿಯಲ್ಲಿ ರೂ. 750 ಕೋಟಿಯಷ್ಟು ಕಡಿ ತಗೊಳಿಸಿರುವುದು ಹಣ ದುಬ್ಬರ ತಡೆಯಲು ಎಂದು ಸರಕಾರದ ವಕ್ತಾರರ ವಾದ. ಈ ಮೊತ್ತ ಕಳೆದ ವರ್ಷದ ಇದೇ ಅವಧಿಯಲ್ಲಿ ಕಡಿತಗೊಳಿಸಿದ ರೂ 500 ಕೋಟಿ ಮೊತ್ತಕ್ಕಿಂತಲೂ ಹೆಚ್ಚಾಗಿರುವುದನ್ನು ಗಮನಿಸಬೇಕು. ಹಣ ದುಬ್ಬರಕ್ಕೆ ಕಾರಣ ಸಾರ್ವಜನಿಕರಲ್ಲಿ ಚಲಾವಣೆಯಲ್ಲಿರುವ ಹಣವು ಕಾರಣವಲ್ಲ. ಬದಲು, ಸರಕಾರದ ಬಂಡವಾಳ ಶಾಹಿ ಭೂಮಾಲಕ ಪರ ಆರ್ಥಿಕ ನೀತಿಯೇ ಕಾರಣ. ಜೀವನಾವಶ್ಯಕ ವಸ್ತುಗಳ ಮೇಲೆ ಪ್ರತೀ ವರ್ಷ ಹೆಚ್ಚುತ್ತಿರುವ ಅಪ್ರತ್ಯಕ್ಷ ತೆರಿಗೆ ; ರೈಲ್ವೆ, ಅಂಚೆ, ತಂತಿ, ಉಕ್ಕು, ತೈಲ, ಕಲ್ಲಿದ್ದಲು, ವಿದ್ಯುತ್, ಇತ್ಯಾದಿ ಸಾರ್ವಜನಿಕ ಸೇವಾ ಸೌಲಭ್ಯಗಳ ಮತ್ತು ಕೈಗಾರಿಕ ಉತ್ಪಾದನೆಗಳ ನಿರಂತರ ದರ ಹೆಚ್ಚಳ; ಅನುತ್ಪಾದಿಕ ವಿಷಯಗಳಿಗೆ ಸರಕಾರದ ಅನಗತ್ಯವಾದ ಖರ್ಚು ವೆಚ್ಚ ; ಅನಿಯಂತ್ರಿತ ಕೊರತೆ ಹಣ ಸೃಷ್ಟಿ ; ಭೂಮಾಲಕರ, ವ್ಯಾಪಾರಿಗಳು ಬಂಡವಾಳ ಗಾರರ ಅತಿ ಲಾಭ ಮತ್ತು ದುಂದುಗಾರಿಕೆ, ಕಳ್ಳಸಂತೆ ಹಾಗೂ ಕಪ್ಪು ಹಣದ ಚಲಾವಣೆ, ಭ್ರಷ್ಟಾಚಾರ ; ಇತ್ಯಾದಿಗಳೇ ಇಂದು ಬೆಲೆ ಏರಿಕೆ ಹಾಗೂ ಹಣ ದುಬ್ಬರಗಳಿಗೆ ಕಾರಣ. ಆದುದರಿಂದ ಸಾರ್ವಜನಿಕರಲ್ಲಿ ಚಲಾವಣೆಗೆ ಅತ್ಯಗತ್ಯವಾಗಿ ಬೇಕಾಗುವ ನೋಟುಗಳ ಮೊತ್ತವನ್ನು, ಮುಖ್ಯವಾಗಿ 1,2 ರೂಪಾಯಿ ನೋಟುಗಳ ಹಾಗೂ 1 ರೂ ಮತ್ತು ಕೆಳಗಿನ ಮೌಲ್ಯದ ನಾಣ್ಯಗಳ ಚಲಾವಣೆಯ ಪ್ರಮಾಣವನ್ನು ಕಡಿಮೆ ಮಾಡುವುದರಿಂದ ಜನ ಸಾಮಾನ್ಯರಿಗೂ ಚಿಲ್ಲರೆವ್ಯಾಪಾರೋದ್ಯಮಿಗಳಿಗೂ ಅಪಾರ ತೊಂದರೆಯಾಗುವುದು.

ಚಿಲ್ಲರೆ ಅಭಾವದಿಂದ ಅಪ್ರತ್ಯಕ್ಷವಾಗಿ ಜೀವನಾವಶ್ಯಕ ವಸ್ತುಗಳ ಬೆಲೆಗಳೂ ಹೆಚ್ಚುವುವು. 1950 ರ ದಶಕದಲ್ಲಿ ರೂಪಾಯಿ-ಅಣೆ-ಪೈ ಪದ್ಧತಿಯಿಂದ ರೂಪಾಯಿ-ಪೈಸೆಯ ಮೆಟ್ರಿಕ್ ಪದ್ಧತಿಗೆ ಬದಲಾಯಿಸಿದಾಗಲೇ ಜೀವನಾವಶ್ಯಕ ವಸ್ತುಗಳ ಬೆಲೆಗಳೂ ವಿವಿಧ ಹಂತಗಳಲ್ಲಿ ಏರಿಕೆಯ ಮಟ್ಟಕ್ಕೆ ತಲುಪಿದ್ದವು. ಉದಾಹರಣೆಗೆ, ಒಂದು ಕೆ. ಜಿ. ಉಪ್ಪಿಗೆ ಒಂದಾಣೆ ಆಗಿದ್ದರೆ ಹೊಸ ಪದ್ಧತಿಯಲ್ಲಿ ಅದರ ಬೆಲೆ ಆರು ಪೈಸೆಗಳಷ್ಟಾಗಿರಬೇಕಿತ್ತು. ಆದರೆ, 1 ಪೈಸೆ, 2 ಪೈಸೆ, 3 ಪೈಸೆ ನಾಣ್ಯಗಳ ಅಭಾವದಿಂದಾಗಿ ಆರು ಪೈಸೆಯ ಉಪ್ಪಿನ ಬೆಲೆ ಹತ್ತು ಪೈಸೆಗಳಿಗೇರಿತು ! ಹಾಗೆಯೇ, ಮೂರಾಣೆಯ ಬೆಲೆ ಹದಿನೆಂಟು ಪೈಸೆಯಾದರೂ, ಚಿಲ್ಲರೆ ಅಭಾವದಿಂದಾಗಿ ವಸ್ತುವಿನ ಬೆಲೆ ಇಪ್ಪತ್ತು ಇಪ್ಪತ್ತೈದು ಪೈಸೆಗಳಿಗೇರಿತು !

ಯಾರ ಹಣದ ಚಲಾವಣೆ ನಿಯಂತ್ರಣ ಬೇಕು?

ಇತ್ತೀಚೆಗಂತೂ, 5ಪೈಸೆ, 10ಪೈಸೆ 20ಪೈಸೆ, 25ಪೈಸೆ, 50ಪೈಸೆ, 100 ಪೈಸೆ (ಒಂದುರೂಪಾಯಿ) ನಾಣ್ಯಗಳು, ಒಂದು ಮತ್ತು ಎರಡು ರೂಪಾಯಿ ಬೆಲೆಯ ನೋಟುಗಳೂ (ಸ್ವಲ್ಪಮಟ್ಟಿಗೆ 5 ರೂಪಾಯಿ ನೋಟುಗಳೂ) ಚಲಾವಣೆಯಲ್ಲಿ ತುಂಬಾ ಕಡಿಮೆಯಾಗಿವೆ. ಸರಕಾರದ ಅಂಕೆ ಸಂಖ್ಯೆಗಳಂತೆಯೇ, ಜನಸಂಖ್ಯೆ ಮತ್ತು ವ್ಯಾಪಾರೋದ್ಯಮಗಳು 1981-82ರಿಂದ 1983-84 ಅವಧಿಯಲ್ಲಿ ಗಣನೀಯವಾಗಿ ಹೆಚ್ಚಿದ್ದರೂ ಚಲಾವಣೆಯಲ್ಲಿರುವ ಒಟ್ಟು ಒಂದು ರೂಪಾಯಿ ನಾಣ್ಯಗಳ ಮೊತ್ತ ರೂ 366 ಕೋಟಿಯಿಂದ ರೂ 401 ಕೋಟಿಯಷ್ಟೇ ಹೆಚ್ಚಾಗಿದೆ. ಹಾಗೆಯೇ, ಈ ಅವಧಿಯಲ್ಲಿ ಚಲಾವಣೆಯಲ್ಲಿರುವ ಸಣ್ಣ ನಾಣ್ಯಗಳ ಮೌಲ್ಯ ರೂ 300 ಕೋಟಿಯಿಂದ ಕೇವಲ ರೂ 330 ಕೋಟಿಗೇರಿದೆ. ಬೆಲೆಗಳು ಅಪ್ರತ್ಯಕ್ಷವಾಗಿ ಏರದಂತೆ, ವ್ಯವಹಾರಗಳು ಸುಗಮವಾಗಿ ನಡೆಯಬೇಕಾದರೆ ಸರಕಾರ ರಿಸರ್ವ್ ಬ್ಯಾಂಕ್ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಸಣ್ಣ ನಾಣ್ಯಗಳನ್ನೂ, 1,2 ರೂಪಾಯಿ ನೋಟುಗಳನ್ನೂ ನಾಣ್ಯಗಳನ್ನೂ ಹೆಚ್ಚಿನ ಪ್ರಮಾಣದಲ್ಲಿ ಮಾರುಕಟ್ಟೆಗೆ-ಚಲಾವಣೆಗೆ ಬಿಡುಗಡೆ ಮಾಡಬೇಕು.

ಬೆಲೆ ನಿಯಂತ್ರಿಸಲು ಪ್ರಮಾಣಿಕವಾಗಿ ಪ್ರಯತ್ನಿಸುವುದಾದರೆ ರೂ 100 ಕ್ಕಿಂತ ಹೆಚ್ಚಿನ ಬೆಲೆಯ ನೋಟುಗಳನ್ನೆಲ್ಲಾ ಒಮ್ಮೆ ಅನಾಣ್ಯಗೊಳಿಸಬೇಕು. (Demonetisation) ಅವುಗಳ ಬದಲಿಗೆ ನಿಜವಾದ ಹಕ್ಕುದಾರರಿಗೆ ಹೊಸ ನೋಟುಗಳನ್ನು ವಿತರಣೆ ಮಾಡಬೇಕು. ಆಗ ಕಪ್ಪು ಹಣ ಬಹು ಪಾಲು ಬೆಲೆ ಕಳೆದುಕೊಂಡು ನಿರುಪಯುಕ್ತ ಕಾಗದದ ಚೂರುಗಳಾಗಿ ಉಳಿಯುವುವು. ಆದರೆ, ಇಂತಹ ದಿಟ್ಟ ಕಾರ್ಯಕ್ರಮಕ್ಕೆ ಇಂದಿರಾ ಸರಕಾರ ಚುನಾವಣೆ ಸಮೀಪಿಸುತ್ತಿರುವಾಗ ಕೈ ಹಾಕೀತೆ ? ಹಾಗೆ ಮಾಡಿದರೆ, ರೂ 77-000 ಕೋಟಿಯಷ್ಟು ದೇಶದ ಕಪ್ಪು ಹಣ ರಾಜಕೀಯ, ಆಡಳಿತ ಭ್ರಷ್ಟಾಚಾರಕ್ಕೆ ಇಂದಿರಾ ಕಾಂಗ್ರೆಸ್ ಬಳಸುವುದು ಹೇಗೆ ? ಆ ಮಾರ್ಗ ಬಿಟ್ಟು ಚಿಲ್ಲರೆ ನಾಣ್ಯಗಳನ್ನೂ, ಸಣ್ಣ ಮೌಲ್ಯದ ನೋಟುಗಳನ್ನೂ ಚಲಾವಣೆಯಿಂದ ತಡೆ ಹಿಡಿದ ಇಂದಿರಾ ಸರಕಾರದ ಜನ ವಿರೋಧಿ ನೀತಿಯನ್ನು ಸ್ಪಷ್ಟವಾಗಿ ಗುರುತಿಸಬಹುದು.

ಚಿಲ್ಲರೆ ಹಣದ ಮಾರಾಟ ಲಾಭ !

ಚಿಲ್ಲರೆ ಅಭಾವದಿಂದ ಸಣ್ಣ ಮೌಲ್ಯದ ನಾಣ್ಯಗಳನ್ನೂ, ನೋಟುಗಳನ್ನು ಅಕ್ರಮವಾಗಿ ಸಂಗ್ರಹಿಸಿ ಕಾನೂನಿಗೆ ವಿರೋಧವಾಗಿ ಹೆಚ್ಚು ಬೆಲೆಗೆ ದಳ್ಳಾಳಿಗಳು ಜನ ಸಾಮಾನ್ಯರಿಗೆ ಮತ್ತು ಚಿಲ್ಲರೆ ವ್ಯಾಪಾರಿಗಳಿಗೆ ಮಾರಿ ಲಾಭಗಳಿಸಲಾರಂಭಿಸಿದ್ದಾರೆ ! ಬ್ಯಾಂಕುಗಳಲ್ಲಿ ಅಲ್ಪ ಸ್ವಲ್ಪ ಪ್ರಮಾಣದಲ್ಲಿ ಹೊಸ ನಾಣ್ಯಗಳ ಮತ್ತು ಹೊಸತಾದ 1,2 ರೂಪಾಯಿ ನೋಟುಗಳ ಸರಬರಾಜು ಆಗುವುದೆಂದು ತಿಳಿದು ಬಂದಾಕ್ಷಣ ಈ ದಳ್ಳಾಳಿಗಳು ಅವುಗಳನ್ನು ಹೇಗಾದರೂ ಮಾಡಿ ತಮ್ಮ ವಶ ತೆಗೆದು ಕೊಳ್ಳುತ್ತಾರೆ. ಮುಂದೆ, ಅಕ್ರಮವಾಗಿ ಹೆಚ್ಚು ಬೆಲೆಗೆ ಅವುಗಳನ್ನು ಬೇಕಾದವರಿಗೆ ಮಾರುತ್ತಾರೆ. ಭಾರೀ ಲಾಭ ಗಿಟ್ಟಿಸುತ್ತಾರೆ ! ಈ ಜಾಲದಲ್ಲಿ ದಳ್ಳಾಳಿಗಳೂ, ಬ್ಯಾಂಕು ಅಧಿಕಾರಿಗಳೂ, ರಾಜಕೀಯ ಪುಢಾರಿಗಳೂ, ಶಾಮೀಲಾಗಿರುವರೆಂದೂ ಅನೇಕ ವರದಿಗಳಿಂದ ತಿಳಿದು ಬಂದಿದೆ. ಸರ್ವ ಸಾಮಾನ್ಯವಾಗಿ ಇತ್ತೀಚೆಗಿನವರೆಗೆ ನಡೆದು ಹೋದ, ಹರಿದು ಹೋದ 1,2 ರೂಪಾಯಿ ನೋಟುಗಳಿಗೆ ಬದಲಾಗಿ ಬ್ಯಾಂಕುಗಳಲ್ಲಿ ಹೊಸ ನೋಟುಗಳು ಸಿಗುತ್ತಿದ್ದವು. ಆದರೆ, ಇತ್ತೀಚೆಗೆ ಅದಕ್ಕೂ ಅಭಾವ. ಇದರಿಂದ ಜನ ಸಾಮಾನ್ಯರಿಗೆ ಮತ್ತು ಹೋಟೆಲು, ದಿನಸಿ, ತರಕಾರಿ ಇತರ ಚಿಲ್ಲರೆ ವ್ಯಾಪಾರಿಗಳಿಗೆ ಅಪಾರ ಕಷ್ಟ ನಷ್ಟ. ಇಂದಿರಾ ಕಾಂಗ್ರೆಸ್ ಪುಢಾರಿಗಳೂ, ಮಂತ್ರಿಗಳು ಸಭೆ ಸಮ್ಮೇಳನಗಳಲ್ಲಿ ಭಾಗವಹಿಸುವಾಗ 1,2 ರೂಪಾಯಿ ನೋಟುಗಳ ಸರಮಾಲೆ ಹಾಕಲು ಹೊಚ್ಚ ಹೊಸತಾದ ನೋಟುಗಳು ಧಾರಾಳವಾಗಿ ಸಿಗುವುದಾದರೂ, ದೈನಂದಿನ ವ್ಯವಹಾರಗಳಿಗೆ ಬೇಕಾಗುವ ಚಿಲ್ಲರೆ ನಾಣ್ಯಗಳಾಗಲೀ, ಸಣ್ಣ ಮೌಲ್ಯದ ರೂಪಾಯಿ ನೋಟುಗಳಾಗಲೀ ಸುಲಭವಾಗಿ ಸಿಗುವುದಿಲ್ಲ !

ಚಿಲ್ಲರೆ ಅಭಾವದಿಂದಾಗಿ, ಜನ ಸಾಮಾನ್ಯರು ಮರಳಿ ಪಡೆಯಬೇಕಾದ ಚಿಲ್ಲರೆಗೆ ಪ್ರತಿಯಾಗಿ ಅನಗತ್ಯವಾಗಿ ಹೆಚ್ಚು ಪ್ರಮಾಣದ ಸಾಮಾನುಗಳನ್ನು ತೆಗೆದುಕೊಳ್ಳಬೇಕಾಗುವುದು. ಚಾಕಲೇಟು ಮುಂತಾದ ಅನವಶ್ಯಕ ವಸ್ತುಗಳನ್ನು ಪಡೆಯಬೇಕಾಗುವುದು. ಕೆಲವೊಮ್ಮೆ ಚಿಲ್ಲರೆ ಹಣದ ಬದಲಿಗೆ ಕೂಪನುಗಳನ್ನು ಪಡೆಯಬೇಕಾಗುವುದು. ಈ ಮಧ್ಯೆ ಪರೋಕ್ಷವಾಗಿ, ಅವಶ್ಯಕ ವಸ್ತುಗಳ ಬೆಲೆಗಳೂ 5, 10 25, 50 ಪೈಸೆಗಳ ಸಮೀಪದಲ್ಲೂ, 1, 2, 5, 10, ರೂಪಾಯಿಗಳ ಸಮೀಪಕ್ಕೂ ಏರುತ್ತಿರುವುವು ! ವ್ಯಾಪಾರಿಗಳ ಲಾಭವೂ ಹೆಚ್ಚುತ್ತಿರುವುದು !

ರಿಸರ್ವ್ ಬ್ಯಾಂಕ್ ಮತ್ತು ಸರಕಾರದ ವಕ್ತಾರರು ಚಿಲ್ಲರೆ ಅಭಾವಕ್ಕೆ ನೆಪಗಳನ್ನು ಹೇಳುತ್ತಿದ್ದಾರೆ. ನೋಟುಗಳನ್ನು ಅಚ್ಚು ಹಾಕಿಸಲಿಕ್ಕೆ ಕಾಗದದ ಕೊರತೆಯಂತೆ, ಅದನ್ನೂ ಆಮದು ಮಾಡಬೇಕಂತೆ ; ಇನ್ನೊಂದೆಡೆ, ನೋಟು ಅಚ್ಚು ಹಾಕಿಸಲು ಮುದ್ರಣಾಲಯಗಳ ಅಭಾವವಂತೆ, ನಾಣ್ಯಗಳನ್ನು ಉತ್ಪಾದಿಸಲು ಲೋಹಗಳ ಮತ್ತು ಲೋಹ ಕಾರ್ಖಾನೆಗಳ

(8ನೇ ಪುಟ ನೋಡಿ)

1. ಸಾರ್ವಜನಿಕರಲ್ಲಿ ಚಲಾವಣೆಯಲ್ಲಿದ್ದ ಒಟ್ಟು ನೋಟುಗಳ ಮೌಲ್ಯ :
(ರೂ 1,2 ರ ನೋಟುಗಳೂ ಸೇರಿ) ; (ರಿಸರ್ವ್ ಬ್ಯಾಂಕ್‌ನ ಅಂಕೆ ಸಂಖ್ಯೆ)

30-3-1984 :	ರೂ 1870 ಕೋಟಿ.
3-8-1984 :	ರೂ. 1120 ಕೋಟಿ.
ಕೊರತೆ :	ರೂ. 750 ಕೋಟಿ.
ಇದೇ ಅವಧಿಯಲ್ಲಿ ಕಳೆದ ವರ್ಷದ ಕೊರತೆ :	ರೂ. 500 ಕೋಟಿ

2. ಆರ್ಥಿಕ ವ್ಯವಸ್ಥೆಯಲ್ಲಿ ಒಟ್ಟು ಹಣದ ಚಲಾವಣೆಯ ಮೌಲ್ಯ :
(ಕೇಂದ್ರ ಸರಕಾರದ ಅಂಕೆ ಸಂಖ್ಯೆ)

ವರ್ಷ	ಜನಸಂಖ್ಯೆ (ಕೋಟಿ)	ದೇಶದ ಒಟ್ಟು ವ್ಯಾಪಾರ, ವಾಣಿಜ್ಯ (ರೂ. ಕೋಟಿ)	ಚಲಾವಣೆಯಲ್ಲಿರುವ ಒಟ್ಟು ನೋಟುಗಳ ಮೌಲ್ಯ (ರೂ. ಕೋಟಿ)	ಚಲಾವಣೆಯಲ್ಲಿರುವ ಒಟ್ಟು ಒಂದು ರೂಪಾಯಿ ನಾಣ್ಯಗಳ ಮೌಲ್ಯ (ರೂ. ಕೋಟಿ)	ಚಲಾವಣೆಯಲ್ಲಿರುವ ಇತರ ಸಣ್ಣ ನಾಣ್ಯಗಳ ಮೌಲ್ಯ (ರೂ. ಕೋಟಿ)
1981-82	68·4	131740	14752	366	306
1983-84	74·0 (ಅಂದಾಜು)	—	15931	401	330

(1-2 ಆಧಾರ : ಇಂಡಿಯನ್ ಎಕ್ಸ್‌ಪ್ರೆಸ್ 2·9·84, ಪುಷ್ಪಾ ಗಿರಿಮಾಜಿ ಅವರ ಸಮೀಕ್ಷೆ)

ಮಾರ್ಕ್ಸ್‌ವಾದ ಮತ್ತು ಭಾರತದಲ್ಲಿ ದೇಶೀಯತೆಯ ಪ್ರಶ್ನೆ | 4

ಭಾಷಾ ಸಮಾನತೆ - ಕೇಂದ್ರ-ರಾಜ್ಯ ಸಂಬಂಧಗಳು — ರಾಷ್ಟ್ರೀಯ ಸಮಗ್ರತೆ

ಕಾಂ. ಬಿ. ಟಿ. ರಣದಿವೆಯವರ **"Marxism and the Nationality Question In India"** ಲೇಖನದ ಈ ಕನ್ನಡ ಅನುವಾದದ ಇದುವರೆಗೆ ಪ್ರಕಟವಾದ ಭಾಗಗಳಲ್ಲಿ ಈ ಸಮಸ್ಯೆಯ ಬಗ್ಗೆ ಮಾರ್ಕ್ಸ್, ಎಂಗಲ್ಸ್, ಲೆನಿನ್ ಮತ್ತು ಸ್ಟಾಲಿನ್ನರ ವಿಶ್ಲೇಷಣೆಗಳ ಸಂಕ್ಷಿಪ್ತ ವಿವರಣೆ ನವವಿಮೋಚಿತ ದೇಶವಾದ ಭಾರತದಲ್ಲಿ ದೇಶೀಯತೆಯ ಸಮಸ್ಯೆಯ ಸ್ವರೂಪ ಮತ್ತು ಇದನ್ನು ಎದುರಿಸುವಲ್ಲಿ ಇತರ ವರ್ಗಗಳ ದೌರ್ಬಲ್ಯ ಹಾಗೂ ಕಾರ್ಮಿಕ ವರ್ಗದ ವಿಶಿಷ್ಟ ಪಾತ್ರದ ವಿಶ್ಲೇಷಣೆಯನ್ನು ಓದಿರುವಿರಿ. ಭಾರತದಲ್ಲಿ ದೇಶೀಯತೆಯ ಸಮಸ್ಯೆಗೆ ಭಾಷಾ ಸಮಾನತೆ, ಅಸಮಾನ ಆರ್ಥಿಕ ಬೆಳವಣಿಗೆ ಹಾಗೂ ಕೇಂದ್ರ—ರಾಜ್ಯಗಳ ನಡುವೆ ಸಮಾನ ಪಾಲುದಾರಿಕೆ ಎಂಬ ಮೂರು ಆಯಾಮಗಳಿದ್ದು ಭಾಷಾ ಸಮಾನತೆ ಹೇಗೆ ಒಂದು ಸುಸಂಗತ ಪ್ರಜಾಪ್ರಭುತ್ವವಾದೀ ನಿಲುವಿನ ಅವಿಭಾಜ್ಯ ಅಂಗವಾಗಿದೆಯೆಂಬುದನ್ನು ಮೂರನೇ ಭಾಗದಲ್ಲಿ ನೋಡಿರುವಿರಿ.

ಭಾರತದ ಆಳುವ ವರ್ಗಗಳು ತಮ್ಮ ಹಿತಾಸಕ್ತಿಗಳಿಗನುಗುಣವಾಗಿ ಹೇಗೆ ಭಾಷಾ ಸಮಾನತೆಯ ನೀತಿಗೆ ಜನಸಾಮಾನ್ಯರ ಭಾಷೆಗಳಿಗೆ ವಂಚನೆ ಮಾಡಿದವು ಕೇಂದ್ರ ರಾಜ್ಯ ಸಂಬಂಧಗಳನ್ನು ಕುರಿತಾದಂತೆ ತಮ್ಮ ಸ್ವಾತಂತ್ರ್ಯ ಪೂರ್ವ ಘೋಷಣೆಗಳತ್ತ ಬೆನ್ನು ತಿರುಗಿಸಿದವು ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ಇನ್ನೊಂದು ವಿಷಯವನ್ನು 'ಐಕ್ಯರಂಗ" ಓದುಗರ ಗಮನಕ್ಕೆ ತರಬಯಸುತ್ತೇವೆ ಇಂಗ್ಲೀಷಿನಲ್ಲಿ **Nation country** ಎಂಬ ಪದಗಳನ್ನು ಅದೇ ರೀತಿ ಕನ್ನಡದ ರಾಷ್ಟ್ರ, ದೇಶ ಮುಂತಾದ ಪದಗಳನ್ನು ಪರ್ಯಾಯ ಪದಗಳಾಗಿ ಬಳಸಲಾಗುತ್ತಿದೆ. ಆದರೆ ಮಾರ್ಕ್ಸ್‌ವಾದ ಒಂದು ವಿಜ್ಞಾನವಾದ್ದರಿಂದ ಮಾರ್ಕ್ಸ್‌ವಾದೀ ಸಾಹಿತ್ಯದಲ್ಲಿ **Nationality Question** ಎಂಬುದನ್ನು ಒಂದು ನಿಖರವಾದ ಅರ್ಥದಲ್ಲಿ ಬಳಸಲಾಗುತ್ತದೆ. ಕನ್ನಡದಲ್ಲಿ ಈ ವಿಷಯದ ಮೇಲೆ ಗಮನಾರ್ಹ ಚಿಂತನೆ ಇದುವರೆಗೆ ನಡೆದಿಲ್ಲವಾದ್ದರಿಂದ ಒಂದು ನಿಖರವಾದ ಸಮಾನಾರ್ಥಕ ಪದ ಬಳಕೆಯಲ್ಲಿಲ್ಲ. ಈ ಅನುವಾದದಲ್ಲಿ ಈವರೆಗೆ ಇದಕ್ಕೆ ರಾಷ್ಟ್ರೀಯತೆ, ರಾಷ್ಟ್ರೀಯ ಗುಂಪು ಎಂಬ ಪದಗಳನ್ನು ಸಂದರ್ಭಕ್ಕನುಸಾರವಾಗಿ ಬಳಸಲಾಗಿತ್ತು. ತಮ್ಮದೇ ಆದ ವಿಶಿಷ್ಟ ಭಾಷೆ, ಸಂಸ್ಕೃತಿ, ಪ್ರದೇಶ ಅಥವಾ ಇತಿಹಾಸ ಪಡೆದಿರುವ ಭಾರತದ ವಿವಿಧ ಭಾಷಾ ಜನಾಂಗಗಳನ್ನು ರಾಷ್ಟ್ರೀಯ ಗುಂಪುಗಳು ಎನ್ನಲಾಗಿತ್ತು. ಆದರೆ ಕೆಲವು ಸಂಗಾತಿಗಳು ಸೂಚಿಸಿರುವಂತೆ ಇಂತಹ ಗುಂಪುಗಳಿಗೆ ದೇಶ ಎಂಬ ಪದ ನಮ್ಮಲ್ಲಿ ಕೆಲವೆಡೆ ಬಳಕೆಯಲ್ಲಿದೆ—ಉದಾ_ಕನ್ನಡ ದೇಶ, ತೆಲುಗು ದೇಶ. ಆದ್ದರಿಂದ ಈ ಭಾಗದಿಂದ ಮುಂದೆ **Nationality** ಎಂಬುದಕ್ಕೆ ಸಮಾನಾರ್ಥಕವಾಗಿ ದೇಶೀಯತೆ, ದೇಶೀಯ ಗುಂಪುಗಳು ಎಂಬ ಪದಗಳನ್ನು ಬಳಸಲಾಗುವುದು. "ರಾಷ್ಟ್ರ" ಎನ್ನುವುದು ಇಂತಹ ದೇಶೀಯ ಗುಂಪುಗಳ ಚಾರಿತ್ರಿಕವಾಗಿ ನಿರ್ಮಾಣಗೊಂಡ ಸಂಘ ಅಥವಾ ಒಕ್ಕೂಟ—ಉದಾ: ಭಾರತ ಸಂಘ, ಸೋವಿಯತ್ ಒಕ್ಕೂಟ, ಸ್ವಿಟ್ಜರ್ಲೆಂಡ್ ಇತ್ಯಾದಿ.

ಯಾವುದೇ ಒಂದು ಭಾಷೆಯನ್ನು ಬಲವಂತದಿಂದ ಹೇರದಿರುವುದು. ಎಲ್ಲಾ ಭಾಷೆಗಳಿಗೆ ಸಮಾನತೆ ಮತ್ತು ಸಂಪರ್ಕಕ್ಕಾಗಿ ಒಂದು ಸರ್ವಸಾಮಾನ್ಯ ಭಾಷೆಯ ಆಯ್ಕೆಯನ್ನು ಸ್ವಯಿಚ್ಛೆಯಿಂದಲೇ ಅಂಗೀಕರಿಸುವುದನ್ನು ಜನತೆಗೇ ಬಿಟ್ಟು ಬಿಡುವುದು-ಹೀಗಿದೆ ಮಾರ್ಕ್ಸ್‌ವಾದೀ ನಿಲುವು.

ಆದರೆ ಇಂತಹ ನಿಲುವನ್ನು ತಳೆಯುವುದು ಎಲ್ಲಾ ಪ್ರಶ್ನೆಗಳ ಬಗ್ಗೆಯೂ ಒಂದು ಸ್ಥಿರವಾದ ಪ್ರಜಾಪ್ರಭುತ್ವವಾದೀ ನಿಲುವು ತಳೆಯುವವರಿಗೆ ಮಾತ್ರವಷ್ಟೇ ಸಾಧ್ಯ. ಭಾರತದ ಸಂವಿಧಾನ ರೂಪಿಸಿದವರಿಗೆ ಇದು ಸಾಧ್ಯವಿರಲಿಲ್ಲ. ಈ ಸಮಸ್ಯೆಯನ್ನು ಅವರು ಹೇಗೆ ಎತ್ತಿಕೊಂಡಿದ್ದರು ಎಂಬುದು ಗ್ರೇನ್‌ವಿಲ್ ಆಸ್ಟಿನ್‌ರ ಪುಸ್ತಕ "ಭಾರತೀಯ ಸಂವಿಧಾನ," ಇತ್ಯಾದಿಯ ಒಂದು ಉದ್ಧರಣೆಯಿಂದ ಸ್ಪಷ್ಟವಾಗುತ್ತದೆ. ರಾಜಮನ್ನಾರ್ ಸಮಿತಿ ಇದನ್ನು ಉದ್ಧರಿಸಿತ್ತು" ಭಾರತದ ಸಮಸ್ಯೆ ಉಪ-ದೇಶೀಯ ಭಾವನೆಗಳು ಮತ್ತು ಉಪ-ದೇಶೀಯ ಸ್ಪರ್ಧೆಗಳ ಸಮಸ್ಯೆಯೇ ಆಗಿತ್ತು ಮತ್ತು ಈಗಲೂ ಅದೇ ಆಗಿದೆ. ಇದು ಆಗಾಗ ಭಾಷಾ ವೈಷಮ್ಯದ ಸ್ವರೂಪ ಪಡೆಯುತ್ತದೆ. ಈ ವೈಷಮ್ಯಗಳು ಈಗಿನ ಪ್ರಮಾಣವನ್ನು ಮತ್ತು ಅವುಗಳು ಈಗ ಪಡೆದಿರುವ ಹಲವು ವೇಷಗಳನ್ನು ಸಂವಿಧಾನ ಸಭೆಯಲ್ಲಿ ಆಗ ಪಡೆದಿರಲಿಲ್ಲ. ಅವು ವ್ಯಕ್ತಗೊಂಡರದ್ದು ಇನ್ನೊಂದು ಉಪ-ದೇಶೀಯ ಗುಂಪಾದ ಹಿಂದೀ ಭಾಷೀಯರ ಭಾಷಾ ಸಂಕುಚಿತವಾದಕ್ಕೆ ವಿರೋಧವಾಗಿ. ದುರದೃಷ್ಟವಶಾತ್ ಸಂವಿಧಾನ ಸಭೆಯಲ್ಲಿ ತೀವ್ರವಾದಿಗಳ ಒಂದು ಗುಂಪು ಹಿಂದೀ ಭಾಷೀಯರನ್ನ ಪ್ರತಿನಿಧಿಸಿತ್ತು. ಇಂತಹದೊಂದು ಸನ್ನಿವೇಶವನ್ನು ಎದುರಿಸಲು ಭಾರತದ್ದೇ ಆದ ಒಂದು ವಿಶಿಷ್ಟ ಮಾದರಿಯಲ್ಲಿ ಸಂವಿಧಾನದ ವಿಧಿಗಳನ್ನು ರೂಪಿಸಲಾಯಿತು. ಸಂವಿಧಾನ ಸಭೆಯ ಸದಸ್ಯರು ಭಾರತಕ್ಕೆ ಆದರ್ಶಪ್ರಾಯವಾಗಿ, ಒಂದು ತನ್ನದೇ ಆದ ರಾಷ್ಟ್ರೀಯ ಭಾಷೆಯಿರಬೇಕೆಂದು ನಂಬಿದ್ದರು ಹಿಂದೀ (ಅಥವಾ ಹಿಂದೂಸ್ತಾನಿ) ಅತ್ಯಂತ ಯೋಗ್ಯವಾದುದರಿಂದಲೇ ಈ ಪಾತ್ರವನ್ನು ವಹಿಸಲು ಅದರ ಹೆಸರನ್ನೇ ಸೂಚಿಸಲಾಯಿತು ಆದರೆ ಆಚರಣೆಯಲ್ಲಿ ಹಿಂದಿ ರಾಷ್ಟ್ರಭಾಷೆಯಾಗಲು ಅಸಾಧ್ಯವಾಗಿತ್ತು. ಯಾಕೆಂದರೆ ರಾಷ್ಟ್ರೀಯ ಬಳಕೆಯಲ್ಲಿದುದು ಏಕಮಾತ್ರ ಇಂಗ್ಲೀಷ್‌ಮಾತ್ರ ಅಲ್ಲದೆ ಇತರ ಉಪರಾಷ್ಟ್ರಗಳು ಹಿಂದಿಯನ್ನು ಅಳವಡಿಸಿದ್ದರಿಂದ ಭಯಗೊಂಡಿದ್ದವು ಹಾಗೂ ತಮ್ಮ ಸ್ವಂತ ಭಾಷೆಗಳ ಬಗ್ಗೆ ಅದಕ್ಕೆ ಹೆಮ್ಮೆಯಿತ್ತು. ಆದ್ದರಿಂದಲೇ ಸಂವಿಧಾನ ರಾಷ್ಟ್ರೀಯ ಆದರ್ಶ ಏನು ಎಂಬುದನ್ನು ಸ್ಪಷ್ಟಪಡಿಸಿ, ನಂತರ ಯಥಾರ್ಥತೆಗನುಗುಣವಾಗಿ ರಾಜಿಮಾಡಿಕೊಂಡು ಭಾಷಾದೃಷ್ಟಿಯಿಂದ ದೇಶ ಹೇಗೆ ಕಾರ್ಯನಿರ್ವಹಿಸಬೇಕು ಎಂದು ವಿಧಿಸುತ್ತದೆ. ಇದಕ್ಕಿಂತ ಹೆಚ್ಚೇನೂ ಮಾಡಲು ಆ ಸಭೆಗೆ ಸಾಧ್ಯವಿರಲಿಲ್ಲ. ಸದಸ್ಯರ ನಡುವಿನ ಕೋಪೋದ್ರಿಕ್ತ ವಿವಾದಗಳೇ ಇದಕ್ಕೆ ಸಾಕ್ಷಿ ಹೀಗಿದ್ದರೂ ಭಾಷಾ ವಿಧಿಗಳು ಕೇವಲ ಒಂದು ಅಸಂತುಷ್ಟ ರಾಜೀಸಂಧಾನ ಮಾತ್ರವೇ ಅಲ್ಲ; ಅದರಲ್ಲೊಂದು ಸಕಾರಾತ್ಮಕ ಹೆಚ್ಚು ಅಂಶವೂ ಇದೆ. ಭಾರತದ ಹಲವು ಭಾಷೆಗಳ ಮತ್ತು ಇಂಗ್ಲೀಷಿನ ಬಳಕೆ ರಾಷ್ಟ್ರೀಯ ಐಕ್ಯತೆಗೆ ಮತ್ತು ಒಂದು ರಾಷ್ಟ್ರೀಯ ಚೈತನ್ಯ ವಿಕಾಸಗೊಳ್ಳುವುದಕ್ಕೆ ವ್ಯತಿರಿಕ್ತವಾಗಿರದೆ ಅನುಗುಣವಾಗಿತ್ತು ಎಂದು ಸಂವಿಧಾನ ಸಭೆಯ ಬಹುಸಂಖ್ಯೆಯ ಸದಸ್ಯರು ನಂಬಿದ್ದರು ಎನ್ನುವುದನ್ನು ಅದು ತೋರಿಸಿಕೊಡುತ್ತದೆ. [ಪುಟ 166-167]

ಸಮಾನತೆಯ ನೀತಿಗೆ ವಂಚನೆ

ಇದೆಲ್ಲಾ ಏನು ಸೂಚಿಸುತ್ತದೆ? ಎರಡೂ ಪಕ್ಷಗಳು ಭಾಷೆಗಳ ಸಮಾನತೆಯ ನೀತಿಗೆ ಮತ್ತು ಜನಸಾಮಾನ್ಯನಿಗೆ ವಂಚನೆ ಮಾಡಿದವು. ಹಿಂದಿಯನ್ನು ಅಧಿಕೃತ ಭಾಷೆ ಮಾಡಬೇಕೆಂದು ಪ್ರತಿಪಾದಿಸಿ ಹಿಂದಿಗೆ ವಿಶಿಷ್ಟ ಸ್ಥಾನಮಾನ ಬೇಕೆನ್ನುವವರು ಇಂಗ್ಲೀಷ್‌ಗೆ ಅವಕಾಶ ಕೊಡಲು ಸಿದ್ಧರಾಗಿದ್ದರು ಮತ್ತು ಹಿಂದಿಯ ವಿರೋಧಿಗಳು ತಾವು ಪ್ರತಿನಿಧಿಸುವ ಜನತೆಯ ಭಾಷೆಗಳ ಬದಲು ಇಂಗ್ಲೀಷಿಗೆ ಸಮಾನ ಸ್ಥಾನಮಾನವನ್ನು ಒಪ್ಪಿಕೊಂಡು ತಮ್ಮ ಭಾಷೆಗಳಿಗೆ ವಂಚನೆ ಮಾಡಿದರು. ಜನತೆಯಲ್ಲಿ ಶೇಕಡಾ ಐದು ಮಂದಿ ಕೂಡಾ ಇಂಗ್ಲೀಷ್ ಮಾತನಾಡುತ್ತಿರಲಿಲ್ಲ. ಅವರಿಗೆ ಇಂಗ್ಲೀಷ್ ಅರ್ಥವಾಗುತ್ತಿರಲಿಲ್ಲ. ಹಿಂದೀ—ವಿರೋಧಿಗಳು ತಾವು ಕೇವಲ ಹಿಂದೀ-ವಿರೋಧಿಗಳೇ ಹೊರತು ಸಮಾನತೆಯ ಪ್ರಜಾಪ್ರಭುತ್ವವಾದೀ ಉದ್ದೇಶ ಸಾಧನೆಗಾಗಿ ಹೋರಾಟ ನಡೆಸುವವರು ಅಲ್ಲ ಎಂದು ತೋರಿಸಿಕೊಂಡರು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇಂಗ್ಲೀಷ್ ಈಗಲೂ ನಮ್ಮ ನಡುವೆ ಇದೆ ಮತ್ತು ಅದರ ಸಧ್ಯದ ಸ್ಥಾನಮಾನ ಮುಂದುವರಿಯಬೇಕೆಂದು ಬಯಸುವ ಜನಗಳೂ ಇದ್ದಾರೆ. ಅವರು ಒಂದೆಡೆ ಎಲ್ಲಾ ಭಾರತೀಯ ಭಾಷೆಗಳ ಸಮಾನ ಸ್ಥಾನಮಾನ ಕೊಡುವಲ್ಲಿ ತೊಂದರೆಗಳಿವೆ ಎಂದು ಹೇಳುತ್ತಾ, ಇನ್ನೊಂದೆಡೆ ಇಂಗ್ಲೀಷ್ ಏಕಮಾತ್ರ ಅಧಿಕೃತ ಭಾಷೆಯಾಗಿಯೇ ಮುಂದುವರಿಯಬೇಕೆಂದು ಬಯಸುತ್ತಾರೆ ರಾಜಮನ್ನಾರ್ ಸಮಿತಿಯ ಸದಸ್ಯರು ಈ ಗುಂಪಿಗೆ ಸೇರಿದವರು. ತಮ್ಮ ವರದಿಯಲ್ಲಿ ಅವರು ಇಂಗ್ಲೀಷ್ ಪರವಾಗಿ ವಾದಿಸಿರುವ ರೀತಿಯನ್ನು ನೋಡಿ—"ಸಂವಿಧಾನದ ಎಂಟನೇ ಪರಿಶಿಷ್ಟದಲ್ಲಿ ನಮೂದಿಸಿರುವ ಎಲ್ಲಾ ಭಾಷೆಗಳನ್ನು ಭಾರತ ಸಂಘದ ಅಧಿಕೃತ ಭಾಷೆಗಳು ಎಂದು ಘೋಷಿಸುವಲ್ಲಿ ಇರುವ ದೊಡ್ಡ ತೊಂದರೆಗಳನ್ನು— ಆಡಳಿತಾತ್ಮಕ ಅಥವಾ ಬೇರೆ ರೀತಿಯ ತೊಂದರೆಗಳನ್ನು-ನಾವು ಅರಿತುಕೊಂಡಿದ್ದೇವೆ. ಅಲ್ಲದೆ ಈಗ ಸಂವಿಧಾನದಲ್ಲಿ ಕಲ್ಪಿಸಿರುವಂತೆ ಯಾವುದೇ ಒಂದು ಭಾಷೆಯನ್ನು ಅಧಿಕೃತ ಭಾಷೆಯೆಂದು ಘೋಷಿಸುವುದು ಕಾರ್ಯಸಾಧ್ಯವೂ ಅಲ್ಲ ಅಥವಾ ಅಪೇಕ್ಷಣೀಯವೂ ಅಲ್ಲ.... ಭಾರತ ಸಂಘದ ಅಧಿಕೃತ ಭಾಷೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಇಂಗ್ಲೀಷ್ ಭಾಷೆಯನ್ನು ಮುಂದುವರಿಸುವುದನ್ನು ಬಿಟ್ಟರೆ ಅನ್ಯ ಮಾರ್ಗವಿಲ್ಲ. ಹಾಗೆಯೇ, ಇಂಗ್ಲೀಷ್ ರಾಜ್ಯಗಳ ನಡುವೆ 'ಸಂಪರ್ಕ' ಭಾಷೆಯಾಗಿ ಮುಂದುವರಿಯಬೇಕು." (ಪುಟ 169-170)

ಭಾಷಾ ಅಸಮಾನತೆಯ ಧೋರಣೆ

ಈ ವರದಿಯನ್ನು ತಯಾರಿಸಿದವರು ಭಾರತದ ಬ್ರಿಟಿಶ್ ಆಳರಸರಂತೆ ಭಾರತೀಯ ಜನತೆಗೆ, ಭಾರತೀಯ ಜನಸಮೂಹಕ್ಕೂ ಮತ್ತು ಕೇಂದ್ರ ಸರಕಾರ ನಡೆಸುವುದಕ್ಕೂ ಏನೇನೂ ಸಂಬಂಧವಿಲ್ಲ ಎಂದು ಭಾವಿಸಿದ್ದಾರೆ. ಆದ್ದರಿಂದ ಕೇಂದ್ರದ ಆಡಳಿತವನ್ನು ಅವರಿಗೆ ಪೂರ್ಣವಾಗಿ ಪರಕೀಯವಾದ ಒಂದು ಭಾಷೆಯಲ್ಲಿ ನಡೆಸಲು ಸಾಧ್ಯ; ಅದು ಇಂಗ್ಲೀಷ್ ಮಾತನಾಡುವ ಉಚ್ಚಕುಲೀನ ಗುತ್ತೇದಾರಿಕೆಯಾಗಬೇಕೆಂದು ಅವರು ಭಾವಿಸಿದ್ದಾರೆ.

ಎಲ್ಲಾ ಭಾಷೆಗಳ ಸಮಾನತೆಯ ಪ್ರಶ್ನೆಯತ್ತ ಬೆನ್ನು ತಿರುಗಿಸಿ, ಹಿಂದಿಯನ್ನು ಭಾರತದ ಸರ್ವ ಭಾಷೆಯಾಗಿ ಸ್ಥಾಪಿಸಲು ಬಯಸಿದ ಕಾಂಗ್ರೆಸ್ ಆಳರಸರು ಕಳೆದ ಮೂರು ದಶಕಗಳಲ್ಲಿ ತಮ್ಮ ಉದ್ದೇಶ ಸಾಧನೆಗೆ ಸರ್ವ ರೀತಿಯ ಕಪಟೋಪಾಯಗಳನ್ನೂ, ತಂತ್ರಗಳನ್ನೂ ಬಳಸಿದರು. ಆದರೆ ತಮ್ಮ ಭಾಷೆಗಳ ಬಗ್ಗೆ ಜನತೆಯ ಉಕ್ಕೇರುತ್ತಿದ್ದ ಭಾವನೆಗಳನ್ನು ಎದುರಿಸಲಾರದೆ ಅವರು ಹಲವು ಬಾರಿ ಹಿಮ್ಮೆಟ್ಟಬೇಕಾಯಿತು. ಶಾಲೆಗಳಲ್ಲಿ ಹಿಂದಿಯನ್ನು ಕಡ್ಡಾಯಗೊಳಿಸಬೇಕೆಂದು ಅವರು ವಿಧಿಸಿದರು. ಅದು ವಿಫಲವಾಯಿತು. ನಂತರ ವಿರೋಧಿಗಳನ್ನು ಸಮಾಧಾನಪಡಿಸಲು ಅವರು ತ್ರಿಭಾಷಾ ಸೂತ್ರ ಸೂಚಿಸಿದರು. ಯಾವುವೂ ಫಲಿಸಲಿಲ್ಲ. ಉತ್ತರದಲ್ಲಿ ಒಂದು ದಾಕ್ಷಿಣಾತ್ಯ ಭಾಷೆಯನ್ನು ಕಲಿಸಬೇಕೆಂದು ವಿಧಿಸಿ ಭಾಷಾ ಸಮಾನತೆಯ ಬೇಡಿಕೆಯನ್ನು ಪುರಸ್ಕರಿಸುವುದು ಅವರಿಗಾಗಲಿಲ್ಲ. ರೇಡಿಯೊ

ಹಾಗೂ ಟಿ.ವಿ.ಗಳಲ್ಲಿ ಹಿಂದಿಯೇತರ ಭಾಷೆಗಳಿಗೆ ಕೊಡಮಾಡಿದ ಅವಧಿಯ ಬಗ್ಗೆ ವಿವಾದ ಅವರು ಸೃಷ್ಟಿಸಿದರು. ಅವರ ಪ್ರತಿಯೊಂದು ಚಿಕ್ಕ, ದೊಡ್ಡ ಕ್ರಮ ರಾಜ್ಯಗಳಲ್ಲಿ ಸಂಕುಚಿತ ಭಾವನೆಗಳಿಗೆ ಎಡೆಮಾಡಿಕೊಟ್ಟಿತು ಅದನ್ನು ಪ್ರತಿಕ್ರಿಯಾವಾದಿಗಳು ಪ್ರಾದೇಶಿಕ ಭಾವನೆಗಳನ್ನು ಉತ್ತೇಜಿಸಲು ದುರುಪಯೋಗಪಡಿಸಿಕೊಂಡರು.

ಪ್ರಜಾಸತ್ತಾತ್ಮಕ ಹಕ್ಕು

ಸಂವಿಧಾನದಲ್ಲಿ ವಿಧಿಸಿದ ಹಾಗೂ ಕಾಂಗ್ರೆಸ್ (ಐ) ಸರಕಾರ ಅನುಸರಿಸಿದ ಭಾಷಾ ಧೋರಣೆ ಅಸಮಾನತೆಯ ಮೇಲೆ ನಿಂತಿದೆಯೆಂಬುದು ಸುವ್ಯಕ್ತ. ಎಲ್ಲಾ ಭಾಷೆಗಳಿಗೆ ಸಮಾನತೆ ನೀಡಲು ನಿರಾಕರಣೆ, ಉರ್ದು ಹಾಗೂ ಇತರ ಕೆಲವು ಭಾಷೆಗಳಿಗೆ ಮಾಡಿದ ಕಣ್ಣಿಗೆ ಹೊಡೆಯುವಂತೆ ಕಾಣುವ ಅನ್ಯಾಯ, ಹಿಂದಿಯನ್ನು ಹೇರುವ, ಇಂಗ್ಲೀಷನ್ನು ಮುಂದುವರಿಸುವ ಪ್ರಯತ್ನ ಇವೆಲ್ಲಾ ಭೇದಭಾವದ ಧೋರಣೆಗಳು ಆಗಾಗ ಸ್ಫೋಟಕ ಪರಿಸ್ಥಿತಿಯುಂಟು ಮಾಡಿವೆ, ದೇಶದ ಸರ್ವ ಸಾಮಾನ್ಯ ಐಕ್ಯತೆ ಹಾಗೂ ಸಮಗ್ರತೆಗೆ ಬೆದರಿಕೆಯೊಡ್ಡಿವೆ. ಹಿಂದಿಯ ಹೇರಿಕೆಯನ್ನು ವಿರೋಧಿಸುವವರಲ್ಲಿ ಕೂಡಾ ಎಲ್ಲರೂ ಈ ಪ್ರಶ್ನೆಯ ಬಗ್ಗೆ ಸರಿಯಾದ ಪ್ರಜಾಸತ್ತಾತ್ಮಕ ನಿಲುವು ತಳೆದಿದ್ದಾರೆ ಎಂದೇನೂ ಅಲ್ಲ. ಭಾಷೆಗಳ ಸಮಾನತೆಯನ್ನು ಕೇಳುವ ಬದಲು ಅವರು ಇಂಗ್ಲೀಷ್‌ಗೆ ಒಂದು ಶಾಶ್ವತ ಸ್ಥಾನಮಾನ ಪಡೆಯಲು ತಮ್ಮ ಪ್ರಯತ್ನಗಳನ್ನು ಕೇಂದ್ರೀಕರಿಸುತ್ತಾರೆ. ತನ್ಮೂಲಕ ತಮ್ಮ ವರ್ಗ ನಿಷ್ಠೆಯನ್ನು ಅವರು ತೋರಿಸಿ ಕೊಳ್ಳುತ್ತಿದ್ದಾರೆ.

ಇವೆಲ್ಲದಕ್ಕೂ ಅವರು ವಿವಿಧ ದೇಶೀಯ ಗುಂಪುಗಳ, ವಿವಿಧ ಭಾಷೆಗಳ ಅಸ್ತಿತ್ವವನ್ನು, ಅವಕ್ಕೆ ಸಮಾನತೆಯ ಭರವಸೆ ನೀಡಬೇಕಾಗಿದೆ ಎಂಬುದನ್ನು ಮಾನ್ಯ ಮಾಡಲು ನಿರಾಕರಿಸುತ್ತಿರುವುದೇ ಕಾರಣ. ಜನತೆಯ ಈ ಪ್ರಜಾಪ್ರಭುತ್ವ ಹಕ್ಕಿನ ಬಗ್ಗೆ ಈ ಬೂರ್ಜ್ವಾ-ಭೂಮಾಲಕ ಸರಕಾರಕ್ಕೆ ಭಯ. ಬೂರ್ಜ್ವಾಗಳು ಮತ್ತು ಭೂಮಾಲಕರ ಆಡಳಿತದಲ್ಲಿ ದೇಶೀಯ ಗುಂಪುಗಳಿಗೆ ಸಮಾನತೆ ಪಡೆಯಲು ಸಾಧ್ಯವಿಲ್ಲ ಎಂಬುದನ್ನು ಇದು ಮತ್ತೊಮ್ಮೆ ತೋರಿಸಿ ಕೊಡುತ್ತದೆ. ಯಾಕೆಂದರೆ ಅದು ಅವರ ವರ್ಗ ಹಿತಾಸಕ್ತಿಗಳಿಗೆ ವ್ಯತಿರಿಕ್ತವಾಗಿದೆ. ಅವರ ಪಾಲಿಗೆ ಇಂತಹ ಒಂದು ಬೇಡಿಕೆ ದೇಶದ ಐಕ್ಯತೆಗೆ ಒಂದು ಅಡ್ಡಿ. ಅರ್ಥಾತ್ ತಮ್ಮ ಪಾಲಿಗೆ ಬಂದಿರುವ ಮಾರುಕಟ್ಟೆಯನ್ನು ಹೇಗೆ ಬೇಕಾದರೂ ಅಡೆತಡೆಯಿಲ್ಲದೆ ಬಳಸಿಕೊಳ್ಳಲು ಬರುವ ಅಡ್ಡಿ.

ಸಿಪಿಐ [ಎಂ] ನಿಲುವು

ಭಾಷಾ ಸಮಾನತೆಯೆಂದರೆ ಒಂದು ಬಹುದೇಶೀಯ ಪ್ರಭುತ್ವದಲ್ಲಿ ಭಾಷಾ ಪ್ರಶ್ನೆಗೆ ಪ್ರಜಾಪ್ರಭುತ್ವ ತತ್ತ್ವದ ಅನ್ವಯವೇ ಆಗಿದೆ. ರಾಷ್ಟ್ರದ ಐಕ್ಯತೆಯನ್ನು ಕಾಯ್ದುಕೊಳ್ಳುವಲ್ಲಿ ಇದೊಂದು ಮಹತ್ತ್ವದ ಅಂಶ ಎಂಬುದನ್ನು ಅರಿತೇ ತಿದ್ದುಪಡಿಯಾದ ನಮ್ಮ ಪಕ್ಷದ ಕಾರ್ಯಕ್ರಮ ಹೀಗನ್ನುತ್ತದೆ- "ಸಂಸತ್ತಿನಲ್ಲಿ ಹಾಗೂ ಕೇಂದ್ರದ ಆಡಳಿತದಲ್ಲಿ ಎಲ್ಲಾ ದೇಶೀಯ ಭಾಷೆಗಳ ಸಮಾನತೆಯನ್ನು ಮಾನ್ಯಮಾಡಲಾಗುವುದು. ಸಂಸತ್ತಿನ ಸದಸ್ಯರಿಗೆ ಯಾವುದೇ ದೇಶೀಯ ಭಾಷೆಯಲ್ಲಿ ಮಾತನಾಡುವ ಹಕ್ಕು ಇರುತ್ತದೆ. ಮತ್ತು ಇತರ ಎಲ್ಲಾ ದೇಶ ಭಾಷೆಗಳಲ್ಲಿ ಅದರ ಅನುವಾದವನ್ನು ಏಕಕಾಲದಲ್ಲಿ ಒದಗಿಸಬೇಕು. ಎಲ್ಲಾ ಶಾಸನಗಳು, ಸರಕಾರೀ ಆಜ್ಞೆಗಳು ಹಾಗೂ ಠರಾವುಗಳನ್ನು ಎಲ್ಲಾ ದೇಶ ಭಾಷೆಗಳಲ್ಲಿ ಒದಗಿಸಲಾಗುವುದು. ಹಿಂದಿಯನ್ನು ಅಧಿಕೃತ ಭಾಷೆಯನ್ನಾಗಿ ಬಳಸುವುದು ಅನಿವಾರ್ಯವಾಗುವುದಿಲ್ಲ. ಹೆಚ್ಚುತ್ತಿರುವ ಆರ್ಥಿಕ, ಸಾಮಾಜಿಕ ಹಾಗೂ ಬೌದ್ಧಿಕ ಸಮಾಗಮಗಳ ಮೂಲಕ ಭಾರತದ ವಿವಿಧ ರಾಜ್ಯಗಳ ಜನತೆ ತಮ್ಮ ಅವಶ್ಯಕತೆಗಳಿಗೆ ಅತ್ಯಂತ ಸೂಕ್ತವಾದ ಪರಸ್ಪರ ಸಂಪರ್ಕದ ಭಾಷೆಯನ್ನು ಕಾರ್ಯತಃ ಅಭಿವೃದ್ಧಿಗೊಳಿಸುತ್ತಾರೆ. ಆಡಳಿತ, ಶಾಸಕೀಯ, ನ್ಯಾಯಾಂಗದ ಕ್ಷೇತ್ರಗಳಿಂದ ಹಾಗೂ ಶಿಕ್ಷಣದ ಮಾಧ್ಯಮವಾಗಿ ಇಂಗ್ಲೀಷನ್ನು ತ್ಯಜಿಸಲಾಗುವುದು. ಅದರ ಸ್ಥಾನದಲ್ಲಿ ದೇಶ ಭಾಷೆಗಳನ್ನು ತರಲಾಗುವುದು. ವಿದ್ಯಾ ಸಂಸ್ಥೆಗಳಲ್ಲಿ ತಮ್ಮ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುವ ಜನತೆಯ ಹಕ್ಕನ್ನು, ಒಂದು ನಿರ್ದಿಷ್ಟ ಭಾಷಾವಾರು ರಾಜ್ಯದಲ್ಲಿ ಅನ್ಯ ದೇಶ ಭಾಷೆಯನ್ನು ಎಲ್ಲಾ ಸಾರ್ವಜನಿಕ ಹಾಗೂ ರಾಜ್ಯದ ಸಂಸ್ಥೆಗಳಲ್ಲಿ, ಅದೇ ರೀತಿ ಅತ್ಯುನ್ನತ ಮಟ್ಟದವರೆಗೂ ಶಿಕ್ಷಣದ ಮಾಧ್ಯಮವಾಗಿ ಬಳಸುವುದನ್ನು, ಆಗತ್ಯವಿದ್ದಲ್ಲಿ ಒಂದು ಪ್ರದೇಶದ ಅಲ್ಪಸಂಖ್ಯಾತರ ಭಾಷೆಯನ್ನು ರಾಜ್ಯದ ಭಾಷೆಯ ಜತೆಗೆ ಬಳಸಬೇಕೆನ್ನುವುದನ್ನು ಜಾರಿಗೊಳಿಸಲಾಗುವುದು. ಉರ್ದು ಭಾಷೆ ಮತ್ತು ಅದರ ಲಿಪಿಯನ್ನು ಸಂರಕ್ಷಿಸಲಾಗುವುದು."

ಎಲ್ಲಾ ಭಾಷೆಗಳಿಗೆ ಸಮಾನತೆ ಸಿಗುವಂತೆ ಮಾಡುವ ಸಮಸ್ಯೆಯನ್ನು ಸಿಪಿಐ (ಎಂ) ಈ ರೀತಿಯಲ್ಲಿ ಬಗೆಹರಿಸಬೇಕೆಂದು ಸೂಚಿಸಿದೆ. ಸಿಪಿಐ (ಎಂ) ನ ಈ ತಿಳುವಳಿಕೆಯೇ ಅದರ ನಿಲುವನ್ನು ಇತರ ಎಲ್ಲಾ ಬೂರ್ಜ್ವಾ ಪಕ್ಷಗಳ ನಿಲುವಿನಿಂದ- ಒಂದು ಭಾಷೆಯನ್ನು ಹೇರುವುದನ್ನು ಬೆಂಬಲಿಸುವವರ ಮತ್ತು ವಿರೋಧಿಸುವವರ ನಿಲುವಿನಿಂದ - ಬೇರ್ಪಡಿಸುವುದು.

ಕೇಂದ್ರ-ರಾಜ್ಯ ಸಂಬಂಧದ ಬಗ್ಗೆ

ಈಗ ಎರಡನೇ ಆಯಾಮ-ಕೇಂದ್ರ-ರಾಜ್ಯಗಳ ಸಂಬಂಧ ಮತ್ತು ಅದನ್ನು ಪುನರ್ರಚಿಸಬೇಕೆಂಬ ಬೇಡಿಕೆ. ಒಂದೊಮ್ಮೆ ಕೇವಲ ನಮ್ಮ ಪಕ್ಷ ಮಾತ್ರ, ಮುಂಬರಲಿರುವ ತೊಂದರೆಗಳನ್ನು ಮೊದಲಾಗಿ ಕಂಡುಕೊಂಡು ಈ ಬೇಡಿಕೆಯನೆತ್ತಿತ್ತು. ಈಗ ಹಲವು ಪಕ್ಷಗಳು ಮತ್ತು ಮಂತ್ರಿಮಂಡಲಗಳು ಅದನ್ನೆತ್ತಿವೆ. ಪರಿಸ್ಥಿತಿ ಹೇಗಾಗಿದೆಯೆಂದರೆ ಕೆಲವು ಕಾಂಗ್ರೆಸ್ [ಐ] ಸರಕಾರಗಳೂ ಕೆಲವು ಬದಲಾವಣೆಗಳಾಗಬೇಕೆಂದು ಕೇಳುತ್ತಿವೆ.

ಸ್ವಾತಂತ್ರ್ಯ ಹೋರಾಟದ ಮುಂದಾಳುಗಳು ನಮ್ಮದು ಏಕದೇಶ ಎಂಬ ದೃಷ್ಟಿಯಿಂದಲೇ ಯೋಚಿಸುತ್ತಿದ್ದರೂ ಕೂಡಾ ಯಥಾರ್ಥ ಸ್ಥಿತಿಯನ್ನು ಅವರು ಗಮನಿಸಬೇಕಾಗಿ ಬಂತು, ಕೆಲವು ರಿಯಾಯ್ತಿ ತೋರಿಸಬೇಕಾಗಿ ಬಂತು. ಮುಸ್ಲಿಂ ಲೀಗ್‌ನಿಂದ ವಿಭಜನೆಯ ಬೆದರಿಕೆ ಬಂದಾಗ 1946 ರಲ್ಲಿ ಕಾಂಗ್ರೆಸ್ ಚುನಾವಣಾ ಕಾರ್ಯಕ್ರಮ ಹೀಗೆ ಹೇಳಿತು —

> ನಾವು ಬ್ರಿಟಿಶರಿಂದ ಪಡೆದುಕೊಂಡ ಪೂರ್ವಾರ್ಜಿತವನ್ನು ಅಂತ್ಯಗೊಳಿಸಿದಾಗ ಮಾತ್ರ ಐಕ್ಯತೆಯ, ಸಮಾನತೆಯ, ಒಂದು ರಾಷ್ಟ್ರ-ಒಂದು ಜನತೆಯೆಂಬ ಭಾವನೆಗಳ ಬಂಧನ ಸೃಷ್ಟಿಸಲು ಸಾಧ್ಯ. ಈ ಹೊಣೆ ನಿಭಾಯಿಸುವಲ್ಲಿ ಬೂರ್ಜ್ವಾ - ಭೂಮಾಲಕ ಸರಕಾರ ವಿಫಲವಾಗಿದೆ ... ಇದು ನಿರೀಕ್ಷಿತವೇ. ಜತೆಗೆ ಇದು ... ಭಾರತದ ಪ್ರಜಾಪ್ರಭುತ್ವ ಚಳುವಳಿ ಹಾಗೂ ಕಾರ್ಮಿಕ ಚಳುವಳಿಯ ವಿಫಲತೆ ಕೂಡಾ

"ಸಂವಿಧಾನದಲ್ಲಿ ಎಲ್ಲಾ ನಾಗರಿಕರ ಹಕ್ಕುಗಳನ್ನು ಹಾಗೂ ಸ್ವಾತಂತ್ರ್ಯಗಳ ಭರವಸೆ ಹೊಂದಿರುವ ಒಂದು ಸ್ವತಂತ್ರ ಹಾಗೂ ಪ್ರಜಾಸತ್ತಾತ್ಮಕ ಪ್ರಭುತ್ವವನ್ನು ಕಾಂಗ್ರೆಸ್ ಚಿತ್ರಿಸಿಕೊಂಡಿದೆ. ಅದರ ಅಭಿಪ್ರಾಯದಲ್ಲಿ ಈ ಸಂವಿಧಾನ ತನ್ನ ಅಂಗ ಘಟಕಗಳಿಗೆ ಸ್ವಯಮಾಡಳಿತಕೊಡುವ ಮತ್ತು ಶಾಸಕಾಂಗಗಳು ವಯಸ್ಕ ಮತದಾನ ಪದ್ಧತಿಯಿಂದ ಆರಿಸಲ್ಪಡುವ ಒಕ್ಕೂಟ ಸ್ವರೂಪ ಪಡೆದಿರಬೇಕು. ಭಾರತದ ಒಕ್ಕೂಟ ಅದರ ವಿವಿಧ ಭಾಗಗಳು ಸ್ವಯಮಿಚ್ಛೆಯಿಂದ ಒಂದುಗೂಡಿದ ಸಂಘವಾಗಬೇಕು. ಅದರ ಅಂಗ ಘಟಕಗಳಿಗೆ ಗರಿಷ್ಠ ಸ್ವಾತಂತ್ರ್ಯವಿರಲು ಸಾಧ್ಯವಾಗುವಂತೆ, ಎಲ್ಲಾ ಘಟಕಗಳಿಗೂ ಅನ್ವಯವಾಗುವ ಸರ್ವಸಾಮಾನ್ಯ ಹಾಗೂ ಅನಿವಾರ್ಯ ವಿಷಯಗಳ ಒಂದು ಕನಿಷ್ಠ ಪಟ್ಟಿ ಹಾಗೂ ಯಾವ-ಯಾವ ಘಟಕಗಳು ಬಯಸುತ್ತವೆಯೋ ಅವು ಮಾತ್ರ ಸ್ವೀಕರಿಸಬಹುದಾದ ಇನ್ನೊಂದು ಐಚ್ಛಿಕ ವಿಷಯಗಳ ಪಟ್ಟಿಯಿರಬೇಕು."

ತಿರುವು-ಮುರುವಾದ ಧೋರಣೆ

ಇದಕ್ಕೆ ಮೊದಲು ಇದೇ ರೀತಿಯ ಬೆದರಿಕೆ ಬಂದಾಗ ಕಾಂಗ್ರೆಸ್ಸು ಪ್ರತ್ಯೇಕಗೊಳ್ಳುವುದಕ್ಕೆ ತನ್ನ ತಾತ್ತ್ವಿಕ ವಿರೋಧ ವ್ಯಕ್ತಪಡಿಸುತ್ತಲೇ ಅದನ್ನು ಸ್ವೀಕರಿಸಿತ್ತು. ಕಾಂಗ್ರೆಸ್ಸು ಭಾರತ ಸಂಘ ಅಥವಾ ಒಕ್ಕೂಟದಿಂದ ಅದರ ಯಾವುದೇ ಅಂಗರಾಜ್ಯ ಅಥವಾ ಪ್ರಾದೇಶಿಕ ಘಟಕಕ್ಕೆ ಪ್ರತ್ಯೇಕಗೊಳ್ಳುವ ಸ್ವಾತಂತ್ರ್ಯವನ್ನು ಕೊಟ್ಟು ಭಾರತದ ವಿಘಟನೆ ನಡೆಸುವ ಯಾವುದೇ ಪ್ರಸ್ತಾಪವನ್ನು ಒಪ್ಪುವುದಿಲ್ಲ. 1942 ರ ಏಪ್ರಿಲ್‌ನಲ್ಲಿ ಕಾರ್ಯಕಾರೀ ಸಮಿತಿ ನಿರ್ಣಯಿಸಿದಂತೆ ಕಾಂಗ್ರೆಸ್ ಭಾರತದ ಸ್ವಾತಂತ್ರ್ಯ ಮತ್ತು ಐಕ್ಯತೆಗೆ ಬದ್ಧವಾಗಿದೆ ಎಂದು ಘೋಷಿಸಿದೆ. ಈ ಆಧುನಿಕ ಜಗತ್ತಿನಲ್ಲಿ ಜನರು ಹೆಚ್ಚೆಚ್ಚು ದೊಡ್ಡ ಒಕ್ಕೂಟಗಳ ಬಗ್ಗೆ ಯೋಚಿಸುತ್ತಿರುವ ಸಮಯದಲ್ಲಿ ದೇಶದ ಈ ಐಕ್ಯತೆಯನ್ನು ಯಾವುದೇ ರೀತಿಯಲ್ಲಿ ಮುರಿಯುವುದು ಸಂಬಂಧಪಟ್ಟ ಎಲ್ಲರಿಗೂ ಹಾನಿಕರವಾದ ಮತ್ತು ಯೋಚಿಸಲು ಅತ್ಯಂತ ಖೇದಕರವಾದ ವಿಷಯ. ಹೀಗಿದ್ದಾಗ್ಯೂ ಯಾವುದೇ ಪ್ರಾದೇಶಿಕ ಘಟಕದ ಜನತೆಯನ್ನು ಅವರ ಘೋಷಿತ ಹಾಗೂ ಸ್ಥಾಪಿತ ಇಚ್ಛೆಗೆ ವಿರುದ್ಧವಾಗಿ ಭಾರತ ಸಂಘದಲ್ಲಿ ಉಳಿಯುವಂತೆ ಒತ್ತಾಯ ಮಾಡುವ ಬಗ್ಗೆ ಕೂಡಾ ಯೋಚಿಸಲು ಸಾಧ್ಯವಿಲ್ಲ ಎಂದು ಈ ಸಮಿತಿ ಘೋಷಿಸುತ್ತದೆ-" ಎಂದಿದೆ 1945 ರ ಸಪ್ಟೆಂಬರ್‌ನ ಪುಣೆ ಠರಾವು.

ಆದರೆ ಒಂದೊಮ್ಮೆ ಕಾಂಗ್ರೆಸ್ಸಿಗೆ ಅಧಿಕಾರ ದೊರೆತು ಭಾರತ ವಿಭಜನೆಗೊಂಡ ಮೇಲೆ ಈ ಸರ್ವ ಸಾಮಾನ್ಯ ವಿಷಯಗಳ ಅತ್ಯಂತ ಸಣ್ಣ ಪಟ್ಟಿ, ಸ್ವಯಮಾಡಳಿತ ಇತ್ಯಾದಿಗಳ ಬಗ್ಗೆ ಇದ್ದ ಉತ್ಸಾಹವೆಲ್ಲಾ ತ್ವರಿತಗತಿಯಿಂದ ಮಾಯವಾಯಿತು. ಅದು ಬೆಸೆದ ಸಂವಿಧಾನ ಸ್ವಯಮಾಡಳಿತ ಮುಂತಾದವುಗಳನ್ನು ಯಾರೂ ಕಿತ್ತುಕೊಳ್ಳಲಾಗದ ನೀತಿ ಎಂದು ಘೋಷಿಸಲಿಲ್ಲ. ಅತ್ತ ಆಚರಣೆಯಲ್ಲಿ ಸಂವಿಧಾನದಲ್ಲಿ ಈ ಬಗ್ಗೆ ಏನೊಂದು ರಕ್ಷಣೆಗಳನ್ನು ನೀಡಲಾಗಿತ್ತೋ ಅವೂ ಕೂಡಾ ಸವೆದು ಹೋದವು. ಭಾಷಾವಾರು ರಾಜ್ಯಗಳ ರಚನೆಯನ್ನು ಕಾಂಗ್ರೆಸ್ ನಾಯಕತ್ವ ಮತ್ತು ಕೇಂದ್ರ ಸರಕಾರ ವಿರೋಧಿಸಿದವು ; ಅದಕ್ಕಾಗಿ ನಡೆದ ಜನರ ಚಳುವಳಿಗಳನ್ನು ರಕ್ತಹರಿಸಿ ದಮನ ಮಾಡಲು ಯತ್ನಿಸಿದವು. ಮೂರು ದಶಕಗಳ ಕಾಂಗ್ರೆಸ್ ಆಳ್ವಿಕೆಯಲ್ಲಿ ಅಧಿಕಾರಗಳನ್ನೆಲ್ಲಾ ಕೇಂದ್ರದಲ್ಲಿ ಜಮಾಯಿಸಿ ಬಿಡುವ ಈ ಪ್ರಕ್ರಿಯೆ, ರಾಜ್ಯಗಳ ಪ್ರತ್ಯೇಕ ಅಸ್ತಿತ್ವವನ್ನು ಅರ್ಥಾತ್ ದೇಶೀಯ ಗುಂಪುಗಳ ಪ್ರತ್ಯೇಕ ಅಸ್ತಿತ್ವದ-ಹೆಚ್ಚು ನಿರಾಕರಣೆ ಮತ್ತಷ್ಟು ತೀವ್ರಗೊಂಡು ಪಂಜಾಬ್ ಪರಿಸ್ಥಿತಿಯ ಭಯಾನಕ ಅನುಭವದಲ್ಲಿ ಕೊನೆಗೊಂಡಿತು ಆ ರಾಜ್ಯಗಳು ಕೇಂದ್ರದ ತೊತ್ತುಗಳು ಆಗಿದ್ದವೇ ಹೊರತು, ಬೇರೇನೂ ಅಲ್ಲ.

ಆಳುವ ವರ್ಗಗಳಿಗೆ ಸಾಧ್ಯವಿಲ್ಲ

ಒಂದು ಬಹು ಭಾಷಾ ಪ್ರಭುತ್ವದಲ್ಲಿ ದೇಶೀಯತೆಯ ಸಮಸ್ಯೆಯನ್ನು ಬಗೆಹರಿಸುವುದು ಒಂದು ಬೂರ್ಜ್ವಾ—ಭೂಮಾಲಿಕ ಸರಕಾರಕ್ಕೆ ಸಾಧ್ಯವಿಲ್ಲ ; ಸಾಮ್ರಾಜ್ಯಶಾಹಿಯ ವಿರುದ್ಧ ನಮ್ಮ ಸ್ವಾಧೀನತೆಯನ್ನು ರಕ್ಷಿಸಿಕೊಳ್ಳಲು ಅತ್ಯಗತ್ಯವಾದ ರಾಷ್ಟ್ರೀಯ ಐಕ್ಯತೆ ಹಾಗೂ ಸಮಗ್ರತೆಯನ್ನು ರಕ್ಷಿಸಲು ಅದಕ್ಕೆ ಸಾಧ್ಯವಿಲ್ಲ-ಎಂಬ ಈ ಸತ್ಯವನ್ನು ಭಾರತೀಯ ಜನತೆ ತಮ್ಮ ಅನುಭವದಿಂದ ಮೆಲ್ಲ-ಮೆಲ್ಲನೆ ಕಂಡುಕೊಳ್ಳುತ್ತಿದ್ದಾರೆ. ದೇಶೀಯ ಅಲ್ಪಸಂಖ್ಯಾತ ಹಾಗೂ ಬುಡಕಟ್ಟು ಗುಂಪುಗಳು ಬೆಸೆದುಕೊಳ್ಳುತ್ತಿರುವುದು ಪ್ರಸ್ತುತ ಜಾಗತಿಕ ಪ್ರವೃತ್ತಿಯಾಗಿರುವ ಆ ರೀತಿಯ ಬೆಸೆತ ಇಲ್ಲಿ ನಡೆಯಲು ಇಂತಹ ಒಂದು ಸರಕಾರದ ಆಡಿಯಲ್ಲಿನ ಆಸ್ತಿ ಸಂಬಂಧ ಒಂದು ಅಡ್ಡಿಯಾಗಿದೆ.

ಈ ಸಮಸ್ಯೆಯನ್ನು ಎದುರಿಸುವಲ್ಲಿ ಹಾಗೂ ವಿಭಿನ್ನ ದೇಶೀಯ ಗುಂಪುಗಳ ಒಗ್ಗಟ್ಟನ್ನು ಸಾಧಿಸುವಲ್ಲಿನ ವಿಫಲತೆಯಿಂದಾಗಿ ದುಷ್ಟ ಲಕ್ಷಣಗಳನ್ನು ಸೂಸುತ್ತಿರುವ ಬೆಳವಣಿಗೆಗಳು ಆದಾಗಲೇ ನಡೆದಿವೆ. ದೇಶದ ಈಶಾನ್ಯ ಭಾಗದಲ್ಲಿ ಈ ಸಮಸ್ಯೆ ಅತ್ಯಂತ ತೀವ್ರ ಹಾಗೂ ವೈಷಮ್ಯ ಪೂರ್ಣ ಮಟ್ಟ ತಲುಪಿದೆ. ಅಲ್ಲಿ ಒಂದಿಲ್ಲೊಂದು ರಾಜ್ಯದಲ್ಲಿ ಭಾರತೀಯ ಸೇನೆಯ ಸೈನಿಕ ಕಾರ್ಯಾಚರಣೆ ಕಂಡು ಬರುತ್ತಿದೆ. ಮಿಜೋರಾಮ್, ನಾಗಾಲ್ಯಾಂಡ್, ಮಣಿಪುರ ಅಸಮಾನತೆ ಮತ್ತು ಅನ್ಯಾಯದ ಬೇಗೆಯಿಂದ ಕುದಿಯುತ್ತಿರುವ ತೀವ್ರ ದೇಶೀಯ ಭಾವನೆಗಳು ತಟ್ಟಿರುವ ತೊಂದರೆಗೀಡಾದ ಪ್ರದೇಶಗಳು ಬೂರ್ಜ್ವಾ—ಭೂಮಾಲಕ ಸರಕಾರದ ಧೋರಣೆಗಳ ದಿವಾಳಿಕೋರತನ ವಿಘಟನೆಗೆ ದಾರಿ ಮಾಡಿ ಕೊಟ್ಟಿರುವುದರ ನಗ್ನ ಸ್ವರೂಪ ಇಲ್ಲಿ ಕಾಣಿಸುತ್ತಿದೆ. ಉಳಿದ ಈಶಾನ್ಯ ರಾಜ್ಯಗಳಲ್ಲೂ ಪರಿಸ್ಥಿತಿ ಸಮಾಧಾನಕರವಾಗಿಯೇನೂ ಇಲ್ಲ ; ಇತರರ ಪ್ರಾಬಲ್ಯಕ್ಕೊಳಗಾಗುವ ಭಯದಿಂದಾಗಿ ಪ್ರಾದೇಶಿಕ ಹಾಗೂ ಪ್ರತ್ಯೇಕತಾವಾದೀ ಪ್ರಭಾವ ಸ್ವಾಭಾವಿಕವಾಗಿಯೇ ಉದಯಗೊಳ್ಳುತ್ತಿದೆ. ಐಕ್ಯತೆಯ ಸರ್ವ ಸಾಮಾನ್ಯ ಬಂಧವನ್ನು ಸೃಷ್ಟಿಸಿ ಬೆಳೆಗೊಳಿಸುವಲ್ಲಿ ಆಳುವ ಪಕ್ಷ ಮತ್ತು ಕೇಂದ್ರ ಸರಕಾರ ಸಂಪೂರ್ಣವಾಗಿ ವಿಫಲಗೊಂಡಿವೆ. ಇದಕ್ಕೆ ವ್ಯತಿರಿಕ್ತವಾಗಿ ಅವುಗಳ ಧೋರಣೆಗಳು ಪರಕೀಯತೆಯ ಪ್ರಕ್ರಿಯೆಯ ವೇಗವನ್ನೇ ಹೆಚ್ಚಿಸಿವೆ.

(7ನೇ ಪುಟ ನೋಡಿ)

ರಾಜ್ಯಾದ್ಯಂತ ಉತ್ಸಾಹಪೂರ್ಣ ಕಾರ್ಯಕ್ರಮಗಳು

'ಸರ್ವರಿಗೂ ಶಿಕ್ಷಣ; ಸರ್ವರಿಗೂ ಉದ್ಯೋಗ' ಚಳುವಳಿ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಮತ್ತು ಭಾರತ ಪ್ರಜಾ ಸತ್ತಾತ್ಮಕ ಯುವಜನ ಫೆಡರೇಷನ್ (ಡಿ. ವೈ.ಎಫ್ ಐ.) ಸಂಘಟನೆಗಳ ನೇತೃತ್ವದಲ್ಲಿ 13 ವಿದ್ಯಾರ್ಥಿ—ಯುವಜನ ಸಂಘಟನೆಗಳು 1981 ರ ಸೆಪ್ಟಂಬರ್ 15 ರಂದು ನವ ದೆಹಲಿಯಲ್ಲಿ ಸರ್ವರಿಗೂ ಶಿಕ್ಷಣ ; ಸರ್ವರಿಗೂ ಉದ್ಯೋಗ ಘೋಷಣೆಯಡಿಯಲ್ಲಿ ಬೃಹತ್ ವಿದ್ಯಾರ್ಥಿ—ಯುವಜನ ಪ್ರದರ್ಶನ ನಡೆಸಿ ಪ್ರಧಾನ ಮಂತ್ರಿಯವರಿಗೆ ಒಂದು ಕೋಟಿ ಸಹಿಗಳೊಂದಿಗೆ ಬೇಡಿಕೆಗಳ ಮನವಿ ಪತ್ರ ಸಲ್ಲಿಸಿದ್ದವು. ಪ್ರತಿಗಾಮಿ ಶಕ್ತಿಗಳು ಜಾತಿ, ಭಾಷೆ, ಪ್ರದೇಶಗಳ ಸಂಕುಚಿತ ಭಾವನೆಗಳನ್ನು ಪ್ರಚೋದಿಸಿ ವಿದ್ಯಾರ್ಥಿ—ಯುವಜನರನ್ನು ತಪ್ಪು ದಾರಿಗೆಳೆಯುತ್ತಿರುವ ಹಿನ್ನೆಲೆಯಲ್ಲಿ ಈ ಚಾರಿತ್ರಿಕ "ಸರ್ವರಿಗೂ ಶಿಕ್ಷಣ ; ಸರ್ವರಿಗೂ ಉದ್ಯೋಗ" ಚಳುವಳಿಯನ್ನು ಎಸ್. ಎಫ್. ಐ. ಮತ್ತು ಡಿ ವೈ. ಎಫ್. ಐ. ಸಂಘಟನೆಗಳು ಪ್ರತಿ ವರ್ಷವೂ ಮತ್ತಷ್ಟು ಬಲಿಷ್ಠವಾಗಿ ಮುನ್ನಡೆಸುತ್ತಿವೆ.

ಈ ಚಳುವಳಿಯ ಅಂಗವಾಗಿ ಎಸ್. ಎಫ್. ಐ. ಮತ್ತು ಡಿ. ವೈ. ಎಫ್. ಐ. ರಾಜ್ಯ ಸಮಿತಿಗಳು ಕರೆ ನೀಡಿದ ಮೇರೆಗೆ ಸೆಪ್ಟಂಬರ್ 4 ರಿಂದ 10 ರವರೆಗೆ "ಜನ ಜಾಗೃತಿ ಸಪ್ತಾಹ" ಹಾಗೂ ಸೆಪ್ಟಂಬರ್ 15 ರಂದು "ಸರ್ವರಿಗೂ ಶಿಕ್ಷಣ ; ಸರ್ವರಿಗೂ ಉದ್ಯೋಗ" ದಿನಾಚರಣೆಯ ಅಂಗವಾಗಿ ರಾಜ್ಯದಾದ್ಯಂತ ಸರ್ಕಾರಿ ಕಛೇರಿಗಳ ಮುಂದೆ "ಸಾಮೂಹಿಕ ಧರಣಿ ಮುಷ್ಕರ" ನಡೆಸಲಾಗಿದೆ. ಅದರ ಸಂಕ್ಷಿಪ್ತ ವರದಿಯನ್ನು ಮುಂದೆ ಕೊಡಲಾಗಿದೆ.

ಬೆಂಗಳೂರು ಜಿಲ್ಲೆ

ಬೆಂಗಳೂರು ಜಿಲ್ಲಾ ಕಛೇರಿಯ ಮುಂದೆ ವಿದ್ಯಾರ್ಥಿನಿಯರೂ ಸೇರಿದಂತೆ ನೂರಾರು ವಿದ್ಯಾರ್ಥಿ—ಯುವಜನರು ಸೆಪ್ಟಂಬರ್ 15 ರಂದು ಸಾಮೂಹಿಕ ಧರಣಿ ಮುಷ್ಕರನ್ನು ನಡೆಸಿದರು. ಸಮೂಹ ಗೀತೆಗಳು, ಘೋಷಣೆಗಳಿಂದ ಆಕರ್ಷಿತರಾಗಿ ಸೇರಿದ ಸಾರ್ವಜನಿಕರನ್ನುದ್ದೇಶಿಸಿ ಎಸ್.ಎಫ್.ಐ. ಮತ್ತು ಡಿ. ವೈ. ಎಫ್. ಐ. ನಾಯಕರಾದ ಕಾಮ್ರೇಡ್ ಶಿವರಾಂ, ಎಸ್. ಆರ್. ಆರಾಧ್ಯ, ಡಿ ಶಿವ ಶಂಕರ್, ಎನ್. ರಾಜಣ್ಣ ಮತ್ತು ಟಿ. ಶಿವಶಂಕರ್‌ರವರು ಮಾತನಾಡಿ ವಿದ್ಯಾರ್ಥಿ ಯುವಜನರು ತಮ್ಮ ಬೇಡಿಕೆಗಳೊಂದಿಗೆ ವಿಶ್ವಶಾಂತಿ, ರಾಷ್ಟ್ರೀಯ ಸಮಗ್ರತೆ ಮತ್ತು ಪ್ರಜಾಪ್ರಭುತ್ವದ ರಕ್ಷಣೆಗಾಗಿಯೂ ಹೋರಾಡಬೇಕೆಂದು ಕರೆ ನೀಡಿದರು. ನಂತರ ವಿಶೇಷ ಜಿಲ್ಲಾಧಿಕಾರಿಯವರಿಗೆ ಸ್ಥಳೀಯ ಬೇಡಿಕೆಗಳೊಂದಿಗೆ ರಾಜ್ಯದ ವಿದ್ಯಾರ್ಥಿ—ಯುವಜನರ 21 ಪ್ರಮುಖ ಬೇಡಿಕೆಗಳ ಮನವಿ ಪತ್ರ ಸಲ್ಲಿಸಲಾಯಿತು. ಮನವಿ ಪತ್ರ ಸ್ವೀಕರಿಸಿ ಮಾತನಾಡಿದ ಜಿಲ್ಲಾಧಿಕಾರಿಯವರು ಸರ್ಕಾರದ ಪರಿಶೀಲನೆಗೆ ಕಳುಹಿಸುವುದಾಗಿ ಭರವಸೆ ನೀಡಿದರು. ಸಪ್ತಾಹದ ಅಂಗವಾಗಿ ಬೆಂಗಳೂರಿನಲ್ಲಿ ಹಲವಾರು ಕಾರ್ಯಕರ್ತರ ಸಭೆಗಳನ್ನು ನಡೆಸಲಾಗಿತ್ತು. ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಸೆಪ್ಟಂಬರ್ 14 ರಂದು 'ವೈಜ್ಞಾನಿಕ ಶಿಕ್ಷಣ ಪದ್ಧತಿ' ಎಂಬ ವಿಷಯದ ಕುರಿತು ಹಾಗೂ ದೊಡ್ಡ ಬಳ್ಳಾಪುರದಲ್ಲಿ ಸೆಪ್ಟಂಬರ್ 16 ರಂದು "ಸರ್ವರಿಗೂ ಶಿಕ್ಷಣ ಸರ್ವರಿಗೂ ಉದ್ಯೋಗ" ಚಳುವಳಿ ಕುರಿತು ವಿಚಾರ ಸಂಕಿರಣಗಳನ್ನು ನಡೆಸಲಾಯಿತು.

ಕುಂದಾಪುರ

ಡಿ.ವೈ.ಎಫ್.ಐ ಮತ್ತು ಎಸ್. ಎಫ್ ಐ. ನೇತೃತ್ವದಲ್ಲಿ ಸೆಪ್ಟಂಬರ್ 15 ರಂದು ಕುಂದಾಪುರದಲ್ಲಿ ಬಹಿರಂಗ ಸಭೆ ನಡೆಯಿತು.

ಡಿ ವೈ. ಎಫ್. ಐ ರಾಜ್ಯ ಸಮಿತಿ ಅಧ್ಯಕ್ಷ ಮಹಾಬಲವಡೇರಹೋಬ್ಳಿ ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಎಸ್. ಎಫ್. ಐ. ದ. ಕ. ಜಿಲ್ಲಾ ಸಮಿತಿ ಅಧ್ಯಕ್ಷ ಕೆ. ವಿಶ್ವನಾಥ್, ರಾಜೀವ ಶೆಟ್ಟಿ, ಡಿ. ವೈ. ಎಫ್. ಐ. ತಾಲ್ಲೂಕು ಸಮಿತಿ ಅಧ್ಯಕ್ಷ ಕೆ. ಶಂಕರ ಖಾರ್ವಿ, ಉಪಾಧ್ಯಕ್ಷ ವೆಂಕಟೇಶ ಕೋಣಿ ಸಭೆಯನ್ನುದ್ದೇಶಿಸಿ ಮಾತನಾಡಿ ವಿದ್ಯಾರ್ಥಿ ಯುವಜನರ ಸಮಸ್ಯೆಯನ್ನು ವಿವರಿಸಿದರು. ಜಿ ಎಂ. ಕೃಷ್ಣ ಸ್ವಾಗತಿಸಿ ಗಣಪು ಬಂಗೇರ ವಂದಿಸಿದರು.

ಮಂಗಳೂರು

ಎಸ್. ಎಫ್. ಐ. ಹಾಗೂ ಡಿ.ವೈ ಎಫ್. ಐ. ಸದಸ್ಯರು ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಛೇರಿ ಮುಂಭಾಗದಲ್ಲಿ ಧರಣಿ ಮುಷ್ಕರ ಮಾಡಿದರು. ಬಳಿಕ ಜಿಲ್ಲಾಧಿಕಾರಿಯವರಿಗೆ ವಿದ್ಯಾರ್ಥಿ ಯುವಜನರ ಪ್ರಮುಖ ಬೇಡಿಕೆಗಳಲ್ಲದೆ ಜಿಲ್ಲಾ ಮಟ್ಟದ ಹಾಗೂ ಸ್ಥಳೀಯ ಬೇಡಿಕೆಗಳ ಈಡೇರಿಕೆಯನ್ನು ಒತ್ತಾಯಿಸಿ ಮನವಿಯನ್ನು ಅರ್ಪಿಸಲಾಯಿತು. ಬೇಡಿಕೆಗಳ ಮನವಿಯಲ್ಲಿ ಶಾಲಾ–ಕಾಲೇಜುಗಳಲ್ಲಿ ಕೊರತೆ ಇರುವ ಅಧ್ಯಾಪಕರ ಸ್ಥಾನವನ್ನು ಭರ್ತಿ ಮಾಡಬೇಕು. ಅರ್ಹ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿಯನ್ನು ನಿರಾಕರಿಸುತ್ತಿರುವ ಕಾಲೇಜುಗಳಲ್ಲಿ ಫೀ ವಿನಾಯಿತಿ ನೀಡಬೇಕು ಮಂಗಳೂರು ನಗರದಲ್ಲಿ ಏರುತ್ತಿರುವ ಹೊಟೇಲುಗಳ ಹಾಗೂ ಸಿನಿಮಾ ಪ್ರದರ್ಶನದ ದರವನ್ನು ಇಳಿಸಬೇಕು ಹಾಗೂ ಇತರ ಸ್ಥಳೀಯ ಬೇಡಿಕೆಗಳನ್ನೊಳಗೊಂಡ ಮನವಿಯನ್ನು ಅರ್ಪಿಸಲಾಯಿತು.

ಉಡುಪಿ

ಎಸ್. ಎಫ್. ಐ. ಮತ್ತು ಡಿ.ವೈ. ಎಫ್. ಐ. ಇವುಗಳ ಉಡುಪಿ ಘಟಕಗಳು ಸಂಯುಕ್ತವಾಗಿ 15-9-84 ರಂದು "ಸರ್ವರಿಗೂ ಶಿಕ್ಷಣ ಸರ್ವರಿಗೂ ಉದ್ಯೋಗ" ಕಾರ್ಯಕ್ರಮವನ್ನು ಆಚರಿಸಿದುವು. ಇದರ ಅಂಗವಾಗಿ ನೂರಾರು ವಿದ್ಯಾರ್ಥಿಗಳು ಹಾಗೂ ಯುವಜನರು ಉಡುಪಿಯ ಸರಕಾರಿ ಕಿರಿಯ ಕಾಲೇಜು ಆವರಣದಿಂದ ತಾಲೂಕು ಕಛೇರಿಯವರೆಗೆ ಮೆರವಣಿಗೆಯಲ್ಲಿ ತೆರಳಿ ಅಲ್ಲಿ ತಮ್ಮ ಬೇಡಿಕೆಗಳ ಮನವಿಯನ್ನು ತಹಶೀಲ್ದಾರರಿಗೆ ಸಲ್ಲಿಸಿದರು.

ಮೈಸೂರು

ಮೈಸೂರು ನಗರದಲ್ಲಿ ಎಸ್.ಎಫ್. ಐ., ಡಿ ವೈ.ಎಫ್ ಐ. ನಗರ ಸಮಿತಿಗಳು ಜಂಟಿಯಾಗಿ ಹೋರಾಟ ಸಮಿತಿಯನ್ನು ರಚಿಸಿಕೊಂಡು ಸೆಪ್ಟಂಬರ್ 4 ರಿಂದ 10 ರವರೆಗೆ "ಜನಜಾಗೃತಿ ಸಪ್ತಾಹ" ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿದವು. ಈ ದಿನಗಳಲ್ಲಿ ನಗರದ ವಿವಿಧ ಪ್ರದೇಶಗಳಲ್ಲಿ 3 ಬೀದಿ ಬದಿಯ ಸಭೆಗಳನ್ನು ನಡೆಸಿ ಹೋರಾಟದ ಬಗ್ಗೆ ಜನರಿಗೆ ತಿಳಿ ಹೇಳಲಾಯಿತು. ಈ ಸಭೆಗಳಲ್ಲಿ ಸುಮಾರು 2 ಸಾವಿರದಷ್ಟು ಜನ ಭಾಗವಹಿಸಿದ್ದರು. ಕಾರ್ಯಕ್ರಮಕ್ಕೆ ವ್ಯಾಪಕ ಪ್ರಚಾರ ಗೋಡೆಬರಹ, ಕರಪತ್ರಗಳ ಮೂಲಕ ನೀಡಲಾಗಿತ್ತು. ಸೆಪ್ಟಂಬರ್ 15 ರಂದು ಎಸ್.ಎಫ್. ಐ, ಡಿ.ವೈ.ಎಫ್.ಐ. ಘಟಕಗಳು ಜಂಟಿಯಾಗಿ ಮೆರವಣಿಗೆ ನಡೆಸಿ ಬೇಡಿಕೆಗಳನ್ನು ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು. ಸಂಜೆವರೆಗೆ ಧರಣಿ ಸತ್ಯಾಗ್ರಹ ನಡೆಸಲಾಯಿತು. ಡಿ. ಬನುಮಯ್ಯ ಕಾಲೇಜಿನ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಕಾರ್ಯಕ್ರಮಕ್ಕೆ ಬೆಂಬಲ ಸೂಚಿಸಿದರು. ಡಿ.ವೈ.ಎಫ್.ಐ. ನ ಜಿ. ಜಯರಾಂ, ಶೇಕ್ ಫರೀದ್, ಎಸ್.ಎಫ್.ಐ. ನ ಬಂಜಗೆರೆ ಜಯಪ್ರಕಾಶ್ ನೇತೃತ್ವ ನೀಡಿದ್ದರು.

ಟಿ. ನರಸೀಪುರ

ಮೈಸೂರು ಜಿಲ್ಲೆಯ ತಾಲೂಕು ಕೇಂದ್ರವಾದ ಟಿ. ನರಸೀಪುರದಲ್ಲಿ ಇದೇ ಮೊದಲ ಬಾರಿಗೆ ಎಸ್.ಎಫ್. ಐ ನೇತೃತ್ವದಲ್ಲಿ ಸೆಪ್ಟಂಬರ್ 15 ರ ಕಾರ್ಯಕ್ರಮವನ್ನು ಆಚರಿಸಲಾಯಿತು. ಸ್ಥಳೀಯ ವಿದ್ಯೋದಯ ಪ್ರಥಮ ದರ್ಜೆ ಕಾಲೇಜ್ ಮತ್ತು ಜೂನಿಯರ್ ಕಾಲೇಜ್ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ನಗರದ ಮುಖ್ಯ ಬೀದಿಗಳಲ್ಲಿ ಬೃಹತ್ ಮೆರವಣಿಗೆ ನಡೆಸಿದರು. ಅಂಗನವಾಡಿ ಶಿಕ್ಷಕಿಯರು ಅವರ ಸಂಘಟನೆಯ ಅಧ್ಯಕ್ಷಣಿ ಟಿ. ಜಿ. ಬಸಮ್ಮನವರ ನೇತೃತ್ವದಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸ್ಥಳೀಯ ತಹಶೀಲ್ದಾರ್‌ರವರಿಗೆ ಮತ್ತು ಪುರಸಭಾ ಅಧ್ಯಕ್ಷರಿಗೆ ಮನವಿ ಸಲ್ಲಿಸಲಾಯಿತು. ನಂತರ ನಡೆದ ಸಭೆಯನ್ನುದ್ದೇಶಿಸಿ ಡಿ.ವೈ.ಎಫ್.ಐ. ಉಪಾಧ್ಯಕ್ಷರಾದ ಮಂಜುನಾಥಸ್ವಾಮಿ, ಎಸ್.ಎಫ್.ಐ. ಕಾರ್ಯದರ್ಶಿ ಶಿವಣ್ಣ, ಕಸ್ತೂರಿ ರಂಗನ್, ಅಧ್ಯಕ್ಷರಾದ ಶಿವರುದ್ರರವರುಗಳು ಮಾತನಾಡಿದರು. ಸ್ಥಳೀಯ ಹಾಗೂ ರಾಜ್ಯ ಮಟ್ಟದ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯ ಪಡಿಸಲಾಯಿತು.

ಗುಂಡ್ಲುಪೇಟೆ

ಮೈಸೂರು ಜಿಲ್ಲೆಯ ಮತ್ತೊಂದು ತಾಲೂಕು ಕೇಂದ್ರವಾದ ಗುಂಡ್ಲುಪೇಟೆಯಲ್ಲಿ ಇದೇ ಮೊದಲ ಬಾರಿಗೆ ಎಸ್. ಎಫ್ ಐ. ನೇತೃತ್ವದಲ್ಲಿ ಸೆಪ್ಟಂಬರ್ 15ರ ಕಾರ್ಯಕ್ರಮ ನಡೆಸಲಾಯಿತು. ಸ್ಥಳೀಯ ಜೆ. ಎಸ್. ಎಸ್. ಕಾಲೇಜ್ ಮತ್ತು ಸರಕಾರಿ ಜೂನಿಯರ್ ಕಾಲೇಜ್ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ನಗರದ ಮುಖ್ಯ ಬೀದಿಗಳಲ್ಲಿ ಘೋಷಣೆ ಕೂಗುತ್ತಾ ಮೆರವಣಿಗೆ ನಡೆಸಿದರು. ಸ್ಥಳೀಯ ತಹಶೀಲ್ದಾರ್ ರವರಿಗೆ ಮನವಿ ಸಲ್ಲಿಸಲಾಯಿತು. ನೆರೆದಿದ್ದ ನಾಗರಿಕರು ಮತ್ತು ವಿದ್ಯಾರ್ಥಿಗಳನ್ನುದ್ದೇಶಿಸಿ ತಹಶೀಲ್ದಾರ್‌ರವರು ಮಾತನಾಡಿ ಸ್ಥಳೀಯ ಎಲ್ಲಾ ಬೇಡಿಕೆಗಳ ಈಡೇರಿಕೆಯ ಭರವಸೆ ನೀಡಿದರು. ಪುರಸಭಾ ಅಧ್ಯಕ್ಷರಿಗೂ ಮನವಿ ಸಲ್ಲಿಸಲಾಯಿತು.

ರಾಜ್ಯ ಎಸ್.ಎಫ್.ಐ. ಅಧ್ಯಕ್ಷರಾದ ಆರ್. ಜಯಕುಮಾರ್ ಮತ್ತು ಸ್ಥಳೀಯ ಎಸ್.ಎಫ್.ಐ. ಅಧ್ಯಕ್ಷರಾದ ಎ.ಬಿ. ಮಹದೇವ, ಸಹಕಾರ್ಯದರ್ಶಿ ನಾಗಭೂಷಣರಾಧ್ಯ ಮೊದಲಾದವರು ಕಾರ್ಯಕ್ರಮಕ್ಕೆ ನಾಯಕತ್ವ ನೀಡಿದ್ದರು.

ಹರಪನ ಹಳ್ಳಿ

ಹರಪನಹಳ್ಳಿಯಲ್ಲಿ ಸರ್ವರಿಗೂ ಶಿಕ್ಷಣ, ಸರ್ವರಿಗೂ ಉದ್ಯೋಗ ದೊರೆಯಬೇಕೆಂಬ ಬೇಡಿಕೆಯನ್ನು ಇಟ್ಟುಕೊಂಡು ಎಲ್ಲಾ ಶಾಲಾ ಕಾಲೇಜಿನ ವಿದ್ಯಾರ್ಥಿ ಪ್ರತಿನಿಧಿಗಳು ಮೌನ ಮೆರವಣಿಗೆಯಲ್ಲಿ ಬಂದು ತಹಶೀಲ್ದಾರವರಿಗೆ ಮನವಿ ಅರ್ಪಿಸಿದರು.

ಅಧಿಕಾರಿಗಳು ಬೇಡಿಕೆಗಳನ್ನು ಸರಕಾರಕ್ಕೆ ಒಪ್ಪಿಸುವ ಭರವಸೆ ನೀಡಿದರು. ನಂತರ ವಿದ್ಯಾರ್ಥಿಗಳಿಂದ ಸಭೆ ನಡೆಸಲಾಯಿತು. ಈ ಸಭೆಯನ್ನುದ್ದೇಶಿಸಿ ಎಸ್.ಎಫ್.ಐ.ನ ಜಿಲ್ಲಾ ಸಮಿತಿಯ ಸದಸ್ಯರಾದ ಕೃಷ್ಣಾಜಿ ಕಲಾಲ್ ನಗರ ಸಮಿತಿಯ ಕಾರ್ಯದರ್ಶಿ ಎಚ್. ಚನ್ನಬಸಪ್ಪ ಪಿ. ಸುಭಾನ್ ಹಾಗೂ ಎಮ್. ಗುರುಬಸವರಾಜ ಮಾತನಾಡಿದರು. ನಂತರ ವಂದನಾರ್ಪಣೆಯನ್ನು ಬಿ. ಲಕ್ಷ್ಮಣ ಮಾಡಿದರು.

ಹೊಸಪೇಟೆ

ಸೆ. 4 ರಂದು ಸರ್ವರಿಗೂ ಶಿಕ್ಷಣ, ಉದ್ಯೋಗದ ಕಾರ್ಯಕ್ರಮದ ಅಂಗವಾಗಿ ನಗರದ ಸರ್ಕಾರಿ ಬಾಲಕಿಯರ ಜೂನಿಯರ್ ಕಾಲೇಜ್‌ನಲ್ಲಿ ವಿಚಾರ ಸಂಕಿರಣ ನಡೆಸಲಾಯಿತು. "ಸರ್ವರಿಗೂ ಶಿಕ್ಷಣ ಮತ್ತು ಉದ್ಯೋಗದ ಮೂಲಭೂತ ಅವಶ್ಯಕತೆ" ವಿಷಯದ ಬಗ್ಗೆ ರಾಜ್ಯ ಸಮಿತಿ ಉಪಾಧ್ಯಕ್ಷರಾದ ಹಾಗೂ ಜಿಲ್ಲಾ ಕಾರ್ಯದರ್ಶಿ ಕಾಂ. ಗುರುಶಾಂತ್ ಅವರು ವಿಚಾರಮಂಡಿಸಿ, ಹಕ್ಕುಗಳನ್ನು ಪಡೆದುಕೊಳ್ಳಲು ಹೋರಾಟ ಅನಿವಾರ್ಯವೆಂದು ಕರೆ ನೀಡಿದರು. ಈ ಸಭೆಯ ಅಧ್ಯಕ್ಷತೆಯನ್ನು ಪ್ರಾಚಾರ್ಯ ಪ್ರೊ. ಸೈಯದ್ ಗಫೂರ್ ಬಿಜಲಿಯವರು ವಹಿಸಿದ್ದರು. ಕಾರ್ಯಕ್ರಮದ ವಿವರಣೆ ಕಾ. ಎಂ.ವಿ. ನಾಯಕ ಅವರಿಂದ ನಡೆಯಿತು. ಕಾಂ. ಕೋದಂಡರಾವ್ ವಂದನಾರ್ಪಣೆ ಮಾಡಿದರು.

ಅಂದು ಸಂಜೆ 4 ಗಂಟೆಗೆ ಸರ್ಕಾರಿ ಬಾಲಕಿಯರ ಪ್ರೌಢ ಶಾಲೆಯಲ್ಲಿ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಕಾ. ಗುರುಶಾಂತ್ ವಿಚಾರ ಮಂಡಿಸಿದರು. ಅಧ್ಯಕ್ಷತೆ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಟಿ. ಬಾಲ ಸರಸ್ವತಿಯವರು ವಹಿಸಿದ್ದರು. ಕಾರ್ಯಕ್ರಮದ ವಿವರಣೆ ಕಾಂ॥ಎನ್. ಮಂಜುನಾಥ ಅವರಿಂದ. ಶ್ರೀಮತಿ ಬಾಲಸರಸ್ವತಿಯವರು ಮಾತನಾಡಿ ಸರ್ವರಿಗೂ ಶಿಕ್ಷಣ, ಉದ್ಯೋಗ ದೊರೆಯಬೇಕೆಂದರು.

10-9-84 ರಂದು ಹೊಸಪೇಟೆಯ "ಬಾಲಕಿಯರ ಹಾಸ್ಟೆಲ್" ನಲ್ಲಿ ವಿಚಾರ ಸಂಕಿರಣ : ಕಾಂ. ಗುರುಶಾಂತ್ ಅವರಿಂದ ವಿಚಾರ ಮಂಡನೆ. ಕಾರ್ಯಕ್ರಮದ ವಿವರಣೆ ಕಾಂ. ಎಲ್. ಮಂಜುನಾಥ್ ಅವರಿಂದ.

ಪ್ಲೈವುಡ್ ಕಾರ್ಮಿಕರ ಒಪ್ಪಂದ

ಇಂಡಿಯನ್ ಪ್ಲೈವುಡ್ ಮೆನ್ಯುಫ್ಯಾಕ್ಚರಿಂಗ್ ಕಂಪೆನಿಯ ರಾಜ್ಯದ ನಾಲ್ಕು ಘಟಕಗಳಲ್ಲಿದ್ದ, ಸಿಐಟಿಯು ನೇತೃತ್ವದ ಕಾರ್ಮಿಕ ಸಂಘಗಳು ಸಮನ್ವಯ ಸಮಿತಿಯೊಂದನ್ನು ರಚಿಸಿಕೊಂಡು, ಅತೀ ಕಡಿಮೆ ಕೂಲಿ ಹಾಗೂ ಇತರ ಸವಲತ್ತುಗಳು ಪಡೆಯುತ್ತಿದ್ದ ಪ್ಲೈವುಡ್ ಕಾರ್ಮಿಕರ ಕೂಲಿ ಹೆಚ್ಚಳಕ್ಕೆ ಹಾಗೂ ತುಟ್ಟಿ ಭತ್ತೆ ಪಡೆಯಲು ಸಂಘಟನೆ-ಹೋರಾಟ ನಡೆಸಲು ಸಿದ್ಧತೆ ನಡೆಸಿದ ಪರಿಣಾಮವಾಗಿ ಇತ್ತೀಚೆಗೆ ಹೆಚ್ಚಿಗೆ ಸವಲತ್ತು ಪಡೆದು ಒಪ್ಪಂದಕ್ಕೆ ಬರಲು ಸಾಧ್ಯವಾಯಿತು.

ದಾಂಡೇಲಿ, ಧಾರವಾಡ, ಹಂಗಾರಕಟ್ಟೆ ಮತ್ತು ನೆಟ್ಟಣ ಈ ನಾಲ್ಕು ಕಾರ್ಖಾನೆಗಳ ಸಂಘಗಳ ಸಮನ್ವಯ ಸಮಿತಿಯ ಜೊತೆಗೆ ಮೊದಲು ಚರ್ಚೆಗೆ ಆಡಳಿತವರ್ಗ ಒಪ್ಪದೇ ಇದ್ದು, ಅನಂತರ ಕಾರ್ಮಿಕರ ಒತ್ತಾಯದ ಪರಿಣಾಮವಾಗಿ ಚರ್ಚೆ ಆರಂಭವಾಯಿತು. ಹಲವು ಸುತ್ತಿನ ಮಾತುಕತೆಗಳಿಂದ ಆಡಳಿತವರ್ಗವು ಮುಖ್ಯ ಬೇಡಿಕೆಗಳಾದ ಒಂದು ಪಾಯಿಂಟಿಗೆ ಎಪ್ಪತ್ತು ಪೈಸೆಯಂತೆ ಬೆಲೆಯೇರಿಕೆಗನುಗುಣವಾಗಿ ಹೆಚ್ಚಿದ ಸೂಚ್ಯಂಕಕ್ಕೆ ಸಿಗುವ ತುಟ್ಟಿಭತ್ತೆ (ವಿ.ಡಿ.ಎ.) ಮತ್ತು ತಿಂಗಳಿಗೆ ರೂ 60 ತುಟ್ಟಿಭತ್ತೆ (ಫಿಕ್ಸೆಡ್ ಡಿ.ಎ.) ಒಪ್ಪಿಕೊಂಡಿದೆ. 1985 ಜನವರಿಯಿಂದ ತಿಂಗಳಿಗೆ ಹತ್ತು ರೂಪಾಯಿ ಮತ್ತು 1986 ಜನವರಿಯಿಂದ ಹತ್ತು ರೂಪಾಯಿ ತುಟ್ಟಿಭತ್ತೆ ಒಟ್ಟು ರೂ. 80 ತುಟ್ಟಿಭತ್ತೆ ಕೊಡಲು ಆಡಳಿತವರ್ಗ ಒಪ್ಪಿರುತ್ತದೆ. ಶೇಕಡಾ 10 ರಷ್ಟು ರಾತ್ರಿ ಪಾಳೆ ಕೆಲಸ ಮಾಡುವವರಿಗೆ ಭತ್ತೆ 26 ದಿವಸಗಳಲ್ಲಿ ಹಾಜರಾದವರಿಗೆ ಒಂದು ದಿವಸದ ಕೂಲಿ ಹಾಜರಿ ಬೋನಸ್ಸಾಗಿ ಮತ್ತು ಇತರ ಸವಲತ್ತುಗಳನ್ನು ಕೊಡಲು ಆಡಳಿತ ವರ್ಗವು ಒಪ್ಪಿದ್ದು, ಈ ಒಪ್ಪಂದವು 1986 ಜೂನ್ ತಿಂಗಳ ಕೊನೆಗೆ ಮುಗಿಯಲಿದೆ. ಈ ಒಪ್ಪಂದದಿಂದ ಒಬ್ಬೊಬ್ಬ ಕಾರ್ಮಿಕನಿಗೆ ಸುಮಾರು ರೂ. 100 ರಿಂದ ರೂ. 150 ವರೆಗೆ ಸಂಬಳದಲ್ಲಿ ತಿಂಗಳಿಗೆ ಹೆಚ್ಚಿಗೆ ದೊರೆಯುತ್ತದೆ. ವೇಜ್ ಸ್ಕೇಲ್ ಗೊತ್ತು ಮಾಡಲಾಗಿದ್ದು, 10 ವರ್ಷ ಕೆಲಸ ಮಾಡಿದವರಿಗೆ ಕೂಲಿ ಹೆಚ್ಚಳವಾಗಲಿದೆ. ರಾಜ್ಯದ ಸಿಐಟಿಯುವಿನ ಕಾರ್ಯದರ್ಶಿಯವರಾದ ವಿ.ಜೆ.ಕೆ. ನಾಯರ್ ಮತ್ತು ಉಪಾಧ್ಯಕ್ಷರಾದ ಕೆ. ಮಹಬ್ಬನವರು ಮಾರ್ಗದರ್ಶನ ನೀಡಿರುತ್ತಾರೆ. ಕಾರ್ಮಿಕ ಸಂಘಗಳ ಸಮನ್ವಯ ಸಮಿತಿ ಹಾಗೂ ಪಂಚಾತಿಗೆ ಸಮಿತಿಗಳ ಸದಸ್ಯರು ಹೋರಾಟದಲ್ಲಿ ಮತ್ತು ಪಂಚಾತಿಗೆಯಲ್ಲಿ ನೇತೃತ್ವ ವಹಿಸಿರುತ್ತಾರೆ.

ಪ್ಲೈವುಡ್ ಕಾರ್ಮಿಕರ ರಾಜ್ಯ ಮಟ್ಟದ ಸಮಾವೇಶಕ್ಕೆ ನಿರ್ಧಾರ :

ರಾಜ್ಯದ ನಾಲ್ಕು ಪ್ಲೈವುಡ್ ಕಾರ್ಖಾನೆಗಳ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಯ ಸಂಚಾಲಕರಾದ ಕೆ. ಶಂಕರ್‌ರವರು, ರಾಜ್ಯದ ಪ್ಲೈವುಡ್ ಕಾರ್ಮಿಕರ ವೇತನ ಒಂದೇ ಮಟ್ಟಕ್ಕೆ ಬರಲು, ಕೆಲಸದ ವರ್ಗೀಕರಣ ಅದಕ್ಕನುಗುಣವಾಗಿ ಗ್ರೇಡ್ ಮತ್ತು ವೇತನ ಇತ್ಯಾದಿ ಸರಿಯಾಗಿ ಗೊತ್ತು ಮಾಡಲು ಅನುಕೂಲವಾಗುವಂತೆ ವಿಮರ್ಶೆ ನಡೆಸಲು ಹಾಗೂ ಕೆಲವು ಬೇಡಿಕೆಗಳನ್ನು ರೂಪಿಸಲು ಪ್ಲೈವುಡ್ ಕಾರ್ಮಿಕರ ರಾಜ್ಯ ಮಟ್ಟದ ಸಮಾವೇಶವನ್ನು ಅಕ್ಟೋಬರ್ ಮೊದಲನೆ ವಾರದಲ್ಲಿ ದಾಂಡೇಲಿಯಲ್ಲಿ ನಡೆಸಲು ನಿರ್ಧಾರ ಕೈಗೊಳ್ಳಲಾಗಿದೆ ಎಂದು ಪತ್ರಿಕಾ ಹೇಳಿಕೆ ನೀಡಿರುತ್ತಾರೆ.

ಶಿಡ್ಲಘಟ್ಟದಲ್ಲಿ ವಿಶ್ವ ಶಾಂತಿ ದಿನಾಚರಣೆ

ವಿಶ್ವ ಶಾಂತಿ ದಿನಾಚರಣೆ ಅಂಗವಾಗಿ ಸೆಪ್ಟೆಂಬರ್ 1 ರಂದು ಬೆಳಿಗ್ಗೆ 10-30 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಶಿಡ್ಲಘಟ್ಟದ ತಾಲ್ಲೂಕು ಕಚೇರಿ ಮುಂಭಾಗದಲ್ಲಿ ಕೋಲಾರ ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ನಿನ ಶಿಡ್ಲಘಟ್ಟ ಶಾಖೆ (ಸಿ.ಐ.ಟಿ.ಯು) ಬೃಹತ್ ಧರಣಿ ಸತ್ಯಾಗ್ರಹ ನಡೆಸಿ, ತಹಸೀಲ್ದಾರರ ಮುಖಾಂತರ ರಾಷ್ಟ್ರಪತಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು. ಸತ್ಯಾಗ್ರಹದಲ್ಲಿ ಸಿ.ಪಿ.ಐ. (ಎಂ) ಕಾರ್ಯಕರ್ತರು, ಯೂನಿಯನ್ ಸದಸ್ಯರು, ದಲಿತ ಒಕ್ಕೂಟ ಸಮಿತಿಯವರು, ವಿದ್ಯಾರ್ಥಿ--ಯುವಜನರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ನಂತರ ನಡೆದ ಸಭೆಯಲ್ಲಿ ಕಾಮಣಿ, ದೊರೆಸ್ವಾಮಿ, ಯುವಜನತಾದ ತಾಲ್ಲೂಕು ಕಾರ್ಯದರ್ಶಿ ರಾಮಣ್ಣ ಮಾತನಾಡಿದರು. ಕೊನೆಯಲ್ಲಿ ರೇಗನ್ನರ ಹಾಗೂ ಬಾಂಬರ್ ವಿಮಾನಗಳ ಪ್ರತಿ ಕೃತಿಗಳಿಗೆ ಕಾ. ಕೆ. ಎಂ. ವೆಂಕಟೇಶ್‌ರವರು ಅಗ್ನಿಸ್ಪರ್ಶ ಮಾಡಿ ಮುಕ್ತಾಯ ಭಾಷಣ ಮಾಡಿದರು.

○

ಕಾರ್ಮಿಕರ ಮಧ್ಯೆ ಕಾ|| ಇ. ಎಂ. ಎಸ್.

ದಿನಾಂಕ - 13-9-1984 ರಂದು ಮುಂಜಾನೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಇ.ಎಂ.ಎಸ್ ನಂಬೂದರಿಪಾಡ್ ಇವರು ರಾಯಚೂರು ಸ್ಪಿನ್ನಿಂಗ್ ಮಿಲ್ ಕಾರ್ಮಿಕರನ್ನುದ್ದೇಶಿಸಿ ಮಾತನಾಡಿ, ಕಾರ್ಮಿಕರು ಒಂದೂವರೆ ತಿಂಗಳಿಂದ ನಡೆಸುತ್ತ ಬಂದಿರುವ ಹೋರಾಟ ತಮ್ಮ ಜೀವನ ಮಟ್ಟವನ್ನು ಮೇಲೇರಿಸಿಕೊಳ್ಳುವ ಆರ್ಥಿಕ ಹೋರಾಟವೇ ಆಗಿದ್ದರು, ಇಡೀ ದೇಶದ ಪ್ರಜಾಸತ್ತಾತ್ಮಕ ಹೋರಾಟದ ಅಂಗವಾಗಿದೆ. ದೇಶಾದ್ಯಂತ ಎಲ್ಲಾ ಕಾರ್ಮಿಕ ಸಂಘಟನೆಗಳು ರಾಷ್ಟ್ರೀಯ ಚಳುವಳಿ ಸಮಿತಿ (ಎನ್.ಸಿ.ಸಿ.) ಯನ್ನು ರಚಿಸಿ ಹಲವಾರು ಪ್ರಜಾಸತ್ತಾತ್ಮಕ ಹೋರಾಟಗಳನ್ನು ನಡೆಸುತ್ತಾ ಬಂದಿರುತ್ತದೆ. ಇದಕ್ಕೆ ದೇಶದ 17 ವಿರೋಧಪಕ್ಷಗಳ ಸಂಪೂರ್ಣ ಬೆಂಬಲವಿದೆ. ಎಂದು ಹೇಳಿದರು

ಬೊಂಬಾಯಿಯ 2 ಲಕ್ಷ ಟೆಕ್ಸ್‌ಟೈಲ್ ಕಾರ್ಮಿಕರು ನಡೆಸಿದ ಸುಧೀರ್ಘ ಹೋರಾಟ ಭಾರತದ ಕಾರ್ಮಿಕ ವರ್ಗದ ಐಕ್ಯತೆಯ ಸಂಕೇತವಾಗಿತೆ. ಇಂದಿರಾ ಸರ್ಕಾರದ ಕಾರ್ಮಿಕ ಸಂಘಟನೆಗಳನ್ನು ಬಿಟ್ಟು ಉಳಿದೆಲ್ಲ ರಾಷ್ಟ್ರಮಟ್ಟದ ಟ್ರೇಡ್ ಯೂನಿಯನ್‌ಗಳು ಒಗ್ಗಟ್ಟಿಗೆ ಬಂದು ರಾಷ್ಟ್ರಮಟ್ಟದ ಸಂಯುಕ್ತ ಹೋರಾಟಗಳನ್ನು ನಡೆಸುತ್ತಿರುವುದು ಶುಭ ಸೂಚನೆ ಯಾಗಿದೆ. ಕಾರ್ಮಿಕರು ಕೇವಲ ತಮ್ಮ ಆರ್ಥಿಕ ಬೇಡಿಕೆಗಳಿಗೆ ಸೀಮಿತವಾಗದೆ, ಸಮಾಜವಾದಿ ಸಮಾಜದ ನಿರ್ಮಾಣಕ್ಕಾಗಿ ಹೋರಾಡುವ ಶಕ್ತಿಗಳೊಂದಿಗೆ ತಮ್ಮನ್ನು ಒಂದಾಗಿಸಿಕೊಳ್ಳಬೇಕು ಎಂದರು.

ರಾಯಚೂರು ಜಿಲ್ಲೆಯ ಯರಮರಸ್ ಸ್ಪಿನ್ನಿಂಗ್ ಮಿಲ್ 500 ಕಾರ್ಮಿಕರು 10-9-84 ರಿಂದ ತಮ್ಮ ಬೇಡಿಕೆಗಳಿಗೆ ಒತ್ತಾಯಿಸಿ, ವಿಧಾನ ಸೌಧದ ಮುಂದೆ ಧರಣಿ ಹೂಡಿರುವುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬೇಕು.

★

ಮಾರ್ಕ್ಸ್‌ವಾದ ಮತ್ತು ಭಾರತದಲ್ಲಿ ದೇಶೀಯತೆಯ ಪ್ರಶ್ನೆ

(5ನೇ ಪುಟದಿಂದ)

ಪ್ರಜಾಪ್ರಭುತ್ವವಾದಿಗಳ ವಿಫಲತೆ ಕೂಡಾ

ಬುಡಕಟ್ಟು ದೇಶೀಯ ಗುಂಪುಗಳುದ ವಾಸವಾಗಿರುವ ಗಡಿ ಪ್ರದೇಶಗಳಿಗೆ ಇತರ ಯಾವುದೇ ಭಾಷಾವಾರು ಪ್ರದೇಶಕ್ಕಿಂತ ಎಷ್ಟೋ ಹೆಚ್ಚು ಗಮನ ನೀಡಬೇಕಾಗಿತ್ತು. ಬ್ರಿಟಿಶ್ ಆಳರಸರು ಹಲವಾರು ವರ್ಷಗಳ ಕಾಲ ಅವರನ್ನು ಭಾರತದ ಉಳಿದ ಭಾಗದಿಂದ ಪ್ರತ್ಯೇಕಗೊಳಿಸಿಟ್ಟಿದ್ದರು. ಈ ಪ್ರದೇಶಗಳಲ್ಲಿ ಭಾರತೀಯರಿಗೆ ಮುಕ್ತ ಪ್ರವೇಶವಿರಲಿಲ್ಲ. ಭಾರತದ ಉಳಿದಭಾಗ ಸಾಮ್ರಾಜ್ಯ ಶಾಹಿ-ವಿರೋಧೀ ಸರ್ವಸಾಧಾರಣ ಹೋರಾಟದಲ್ಲಿ ಪಾಲುಗೊಂಡಂತೆ ಅವು ಪಾಲುಗೊಳ್ಳಲಿಲ್ಲ. ಅವರು ಭಾರತೀಯ ಜನತೆಯಿಂದ ದೂರವಿದ್ದು ಬ್ರಿಟಿಶರ ವಿರುದ್ಧ ತಮ್ಮದೇ ಆದ ಕದನಗಳಲ್ಲಿ ಹೋರಾಡಿದ್ದರು. ಎಷ್ಟೋ ಮಿಗಿಲಾಗಿ ಪ್ರತ್ಯೇಕತೆಯನ್ನು ಮತ್ತು ಭಾರತೀಯರ ಬಗ್ಗೆ ಭಯವನ್ನು ಉಪದೇಶಿಸಲು ಕ್ರಿಶ್ಚಿಯನ್ ಮಿಶನರಿಗಳನ್ನು ಅವರ ಮೇಲೆ ಛೂ ಬಿಡಲಾಗಿತ್ತು. ನಾವು ಪೂರ್ವಾರ್ಜಿತವಾಗಿ ಪಡೆದಿರುವ ಇವನ್ನು ಅಂತ್ಯಗೊಳಿಸಿದಾಗ ಮಾತ್ರ ಐಕ್ಯತೆಯ, ಸಮಾನತೆಯ, ಒಂದು ರಾಷ್ಟ್ರಹಾಗು ಒಂದು ಜನತೆಯೆಂಬ ಭಾವನೆಗಳ ಬಂಧನ ಸೃಷ್ಟಿಸಲು ಸಾಧ್ಯ ಈ ಹೊಣೆ ನಿಭಾಯಿಸುವಲ್ಲಿ ಬೂರ್ಜ್ವಾ-ಭೂಮಾಲಕ ಸರಕಾರ ಮತ್ತು ಅದರ ಧೋರಣೆಗಳು ಸಂಪೂರ್ಣವಾಗಿ ವಿಫಲವಾದವು.

ಆದರೆ ಇದು ಕೇವಲ ಆಳುವ ಪಕ್ಷದ ಮತ್ತು ಕೇಂದ್ರ-ಸರಕಾರದ ವಿಫಲತೆ ಮಾತ್ರವಲ್ಲ. ವಾಸ್ತವವಾಗಿ ಅವರ ವರ್ಗಧೋರಣೆಗಳು ಹಾಗೂ ಕಣ್ಣೋಟ ಈ ಸಮಸ್ಯೆಯನ್ನು ಮತ್ತು ಪ್ರತ್ಯೇಕತಾಭಾವವನ್ನು ಉಲ್ಬಣಗೊಳಿಸುತ್ತದೆಂಬುದು ನಿರೀಕ್ಷಿತವೇ. ಜತೆಗೆ ಇದು ಆ ಬುಡಕಟ್ಟು ಗುಂಪುಗಳನ್ನು ಐಕ್ಯ ಹೋರಾಟಗಳತ್ತ ಸೆಳೆದು ಅವರ ಸಮ್ಮುಖ ತಮ್ಮ ಹಿಂದುಳಿದಿರುವಿಕೆಯನ್ನು ನೀಗಿಸುವ ಉದ್ದೇಶಗಳನ್ನು ಮತ್ತು ಗುರಿಗಳನ್ನು ಪ್ರಸ್ತುತಗೊಳಿಸುವಲ್ಲಿ ಭಾರತದ ಪ್ರಜಾಪ್ರಭುತ್ವವಾದೀ ಚಳುವಳಿ ಕಾರ್ಮಿಕವರ್ಗದ ಚಳುವಳಿಗಳ ಒಂದು ವಿಫಲತೆಕೂಡಾ ಇದು ದೇಶಿಯಗುಂಪುಗಳೊಡನೆ ಅಸಮಾನ ವರ್ತನೆಯ ಸಮಸ್ಯೆಯನ್ನು ತೀವ್ರವಾಗಿ ಪರಿಗಣಿಸಿ, ದೇಶಿಯ ಗುಂಪುಗಳ ಹೋರಾಟವನ್ನು ತಮ್ಮ ಹೋರಾಟವನ್ನಾಗಿ ಮಾಡಿಕೊಂಡಿದ್ದೇವೆ ಎಂದು ಅವರಲ್ಲಿ ಭರವಸೆ ಹುಟ್ಟಿಸುವಲ್ಲಿ ಕಾರ್ಮಿಕವರ್ಗ ಹಾಗು, ಪ್ರಜಾಪ್ರಭುತ್ವವಾದೀ ಆಂದೋಲನಗಳ ಒಂದು ವಿಫಲತೆ.

[ಮುಂದುವರಿಯುವುದು]

ಕೋಣಿ ರೈತರ ಸಭೆ

ದ.ಕ ಜಿಲ್ಲಾ ಕುಂದಾಪುರ ತಾಲೂಕು ಕೋಣಿ ಗ್ರಾಮದ ರೈತಸಂಘದ ಸಭೆಯು ರೈತ ಮುಂದಾಳು ಕಾಂ. ಅನಂತಪೂಜಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು. ತಾಲೂಕುರೈತ ಸಂಘದ ಜೊತೆ ಕಾರ್ಯದರ್ಶಿ ಕಾಂ. ವೆಂಕಟೇಶ ಕೋಣಿಯವರು ಸಭೆಯಲ್ಲಿ ಭಾಗವಹಿಸಿದರು.

ಗ್ರಾಮ ಸಮಿತಿಯನ್ನ ಪುನರ್ ರಚಿಸಲಾಗಿತು ಈ ಕೆಳಗಿನವರನ್ನು ಪದಾಧಿಕಾರಿಗಳನ್ನಾಗಿ ಆಯ್ಕೆ ಮಾಡಲಾಯಿತು. ಮೋತಿ ಡಿಸೋಜ (ಅಧ್ಯಕ್ಷ), ಕೆ. ಅನಂತಪೂಜಾರಿ (ಉಪಾಧ್ಯಕ್ಷ) ಕೆ. ಬಾಬು (ಕಾರ್ಯದರ್ಶಿ) ಲಕ್ಷ್ಮಣ (ಜೊತೆಕಾರ್ಯದರ್ಶಿ) ಕೆ. ಚಂದ್ರ ಅನಂತ, ತೀಸಕೆಳಕೇರಿ, ಕೆ. ಸೀತ, ಕೆ. ಪದ್ದು, ಶಿವ, ರಾಮನಾಯ್ಕ, ವೆಂಕಟೇಶಕೋಣಿ, ಮಹಾಬಲದೇವರಬೈಲ್ (ಸದಸ್ಯರು).

ಕೋಣಿಗ್ರಾಮದಲ್ಲಿ ಸಹಕಾರ ಸಂಘದ (ರೇಶನ್ ಅಂಗಡಿ) ಮೂಲಕ ಪಾಮೊಲಿನ್ ಎಣ್ಣೆಯನ್ನು ಕಾರ್ಡುದಾರರಿಗೆ ವಿತರಣೆ ಮಾಡದಿರುವುದನ್ನು ಸಭೆಯಲ್ಲಿ ಚರ್ಚಿಸಿ, ಸೊಸೈಟಿಯ ಡೈರೆಕ್ಟರ್ ಆಗಿರುವ ರೈತ ಸಂಘದ ಅಧ್ಯಕ್ಷರಾದ ಮೋತಿಡಿಸೋಜರು ಸೊಸೈಟಿಯ ಆಡಳಿತ ಸಭೆಯಲ್ಲಿ ಕಾರ್ಡುದಾರರಿಗೆ ಕೂಡಲೇ ಪಾಮೊಲಿನ್ನು ವಿತರಣೆ ಮಾಡುವಂತೆ ಒತ್ತಾಯಿಸಬೇಕೆಂದು ನಿರ್ಣಯಿಸಲಾಯಿತು.

ಸವದತ್ತಿ - ಎಸ್.ಎಫ್.ಐ. ಗೆ ನೂತನ ಪದಾಧಿಕಾರಿಗಳು

ಸವದತ್ತಿಯ ಎರಡು ವಿದ್ಯಾ ಸಂಸ್ಥೆಗಳಲ್ಲಿ ಎಸ್. ಎಫ್. ಐ. ಘಟಕಗಳ ನೂತನ ಪದಾಧಿಕಾರಿಗಳನ್ನು ಇತ್ತೀಚೆಗೆ ಆಯ್ಕೆ ಮಾಡಲಾಯಿತು.

ಎಸ್. ವಿ ಎಸ್. ಬಿ. ಕಲಾ ಮತ್ತು ವಾಣಿಜ್ಯ ಮಹಾ ವಿದ್ಯಾಲಯ ಘಟಕ

ಅಧ್ಯಕ್ಷ: ಕಾ|| ಕೆ. ಡಿ ಚೂರಿಖಾನ್, ಉಪಾಧ್ಯಕ್ಷ: (1) ಕಾ|| ಸಿ. ಸಿ. ಮುಂಡಾಸ್, (2) ಕಾ|| ಎಸ್. ವಿ. ವೈದ್ಯ, ಕಾರ್ಯದರ್ಶಿ : ಕಾ|| ಎಂ. ಸಿ. ಜೈನ, ಸಹಕಾರ್ಯದರ್ಶಿ : ಕಾ|| ಸಿ. ಬಿ. ದೊಡಗೌಡರ, ಕೋಶಾಧ್ಯಕ್ಷ : ಕಾ|| ಎಂ. ವೈ. ಲದ್ವಾ, ಕಾರ್ಯಕಾರಿ ಸಮಿತಿಗೆ 6 ಜನ ಸಂಗಾತಿಗಳು ಆಯ್ಕೆ ಆಗಿದ್ದಾರೆ.

ಎಸ್. ಕೆ. ಸಂಯುಕ್ತ ಕಿರಿಯ ಮಹಾ ವಿದ್ಯಾಲಯ, ಘಟಕ

ಅಧ್ಯಕ್ಷ: ಕಾ|| ಆರ್. ಎಸ್. ಹಿರೇಮಠ, ಉಪಾಧ್ಯಕ್ಷ : ಕಾ|| (1) ಡಿ. ಎಸ್. ಗಿರಿಜಣ್ಣನವರ, (2) ಎಸ್. ಎಸ್. ಗೌಡರ, ಕಾರ್ಯದರ್ಶಿ : ಕಾ|| ಕೆ. ಆರ್. ಕಟ್ಟಿ, ಸಹಕಾರ್ಯದರ್ಶಿ : ಕಾ|| ಎ. ಪಿ. ಸೊನ್ನದ ಕೋಶಾಧ್ಯಕ್ಷ : ಕಾ|| ಎಸ್. ಐ. ಹೊಂಗಲ, 10 ಜನ ಸದಸ್ಯರ ಕಾರ್ಯಕಾರಿ ಸಮಿತಿಯೂ ಆಯ್ಕೆಯಾಗಿದೆ.

ಉಪನ್ಯಾಸ ಕಾರ್ಯಕ್ರಮ :

ದಿನಾಂಕ 10-9-84 ರಂದು ಸವದತ್ತಿ ಎಸ್. ಕೆ. ಕಿರಿಯ ಮಹಾವಿದ್ಯಾಲಯದಲ್ಲಿ ಒಂದು ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ದೆಹಲಿ ನೆಹರೂ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ನಡೆಸುತ್ತಿರುವ ಅಶೋಕ ಶೆಟ್ಟರ ಇವರು "ಭಾರತ ಇತಿಹಾಸ ಅಧ್ಯಯನದ ಹಿನ್ನೆಲೆಯಲ್ಲಿಯ ಸೈದ್ಧಾಂತಿಕ ನಿಲುವುಗಳು" ಎಂಬ ವಿಷಯದ ಬಗ್ಗೆ ಮಾತನಾಡಿದರು. ಪ್ರೊ. ಎಸ್. ಜಿ. ಕನ್ನೂರ ಇವರು ಅಧ್ಯಕ್ಷತೆ ವಹಿಸಿದ್ದರು.

○

ಹರಸನ ಹಳ್ಳಿಯಲ್ಲಿ ಅಧ್ಯಯನ ಶಿಬಿರ

ಸೆಪ್ಟೆಂಬರ್ 8 ಮತ್ತು 9 ರಂದು ಹರಸನಹಳ್ಳಿಯಲ್ಲಿ ಎಸ್.ಎಫ್.ಐ. ಅಧ್ಯಯನ ಶಿಬಿರವನ್ನು ನಡೆಸಲಾಯಿತು. ಈ ಹಿಂದೆ ಎಸ್.ಎಫ್.ಐ. ಅನೇಕ ಹೋರಾಟಗಳನ್ನು ಮಾಡುತ್ತ ಬಂದಿದ್ದು, ಈ ಹಿಂದಿನ ಎಲ್ಲಾ ಅನುಭವಗಳನ್ನು ಕ್ರೋಢೀಕರಿಸಿ ವಿದ್ಯಾರ್ಥಿಗಳಿಗೆ ಸೈದ್ಧಾಂತಿಕ ತಿಳುವಳಿಕೆ ಕೊಡಲು ಈ ಅಧ್ಯಯನ ಶಿಬಿರವನ್ನು ಹಮ್ಮಿಕೊಳ್ಳಲಾಯಿತು.

ಈ ಶಿಬಿರದ ಮೊದಲ ಅಂಗವಾಗಿ ಉದ್ಘಾಟನಾ ಸಮಾರಂಭ ನಡೆಯಿತು. ಈ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾದ ಎಸ್ ವೈ. ಗುರುಶಾಂತರವರು ವಹಿಸಿದ್ದರು ಉದ್ಘಾಟನೆಯನ್ನು ಶ್ರೀ ವೀರಭದ್ರಯ್ಯ ವಕೀಲರು ನಡೆಸಿಕೊಟ್ಟರು. ಶ್ರೀ ಸಯ್ಯದ್‌ಹುಸೇನ್ ವಕೀಲರು ಮತ್ತು ವೀರನಗೌಡರು ಉಪನ್ಯಾಸಕರಾಗಿ ಬಂದಿದ್ದರು. ಪರಿಚಯ ಮತ್ತು ಸ್ವಾಗತ ಪಿ.ಆರ್. ವೆಂಕಟೇಶರವರು ಮಾಡಿದರು. ಎಸ್.ಎಫ್.ಐ. ರಾಜ್ಯ ಸಮಿತಿಯ ಅಧ್ಯಕ್ಷರಾದ ಆರ್ ಜಯಕುಮಾರ್‌ರವರು ಎಸ್ ಎಫ್.ಐ. ಬಗ್ಗೆ ಪರಿಚಯ ಮಾಡಿಕೊಟ್ಟರು. ನಂತರ ವೀರಭದ್ರಯ್ಯ ವಕೀಲರು, ಸಯ್ಯದ್ ಹುಸೇನ್ ವಕೀಲರು ವೀರನಗೌಡ ಉಪನ್ಯಾಸಕರು, ಎಸ್. ಎಫ್.ಐ. ಜಿಲ್ಲಾಸಮಿತಿಯ ಕಾರ್ಯದರ್ಶಿಯಾದ ಎಸ್.ವೈ. ಗುರುಶಾಂತರವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ನಂತರ ಎಚ್. ಚನ್ನಬಸಪ್ಪನವರು ವಂದನಾರ್ಪಣೆಯನ್ನು ಮಾಡಿದರು.

12 ಗಂಟೆಗೆ ತರಗತಿ ಪ್ರಾರಂಭವಾಯಿತು. ಈ ಶಿಬಿರದಲ್ಲಿ ಮೊದಲು ಎಸ್.ಎಫ್.ಐ. ರಾಜ್ಯ ಸಮಿತಿಯ ಅಧ್ಯಕ್ಷರಾದ ಆರ್. ಜಯಕುಮಾರ್ ರವರು ಎಸ್.ಎಫ್.ಐ.ನ ಸಂವಿಧಾನ, ಗುರಿ, ಉದ್ದೇಶ ಮತ್ತು ಕಾರ್ಯಕ್ರಮಗಳ ಕುರಿತು ಮಾತನಾಡಿದರು. ಪ್ರೊ. ಎಸ್. ಎಸ್. ಹಿರೇಮಠರವರು ಅಭ್ಯಾಸ ಮತ್ತು ಹೋರಾಟದ ಬಗ್ಗೆ ಮಾತನಾಡಿದರು. ಪ್ರೊ. ಎ. ಟಿ. ಮಠರವರು ಮೂಢನಂಬಿಕೆ ಮತ್ತು ವೈಜ್ಞಾನಿಕ ಶಿಕ್ಷಣ ಪದ್ಧತಿಯ ಬಗ್ಗೆ ಮಾತನಾಡಿದರು. ಪ್ರೊ. ಮುರಳಿ ಕೃಷ್ಣಮೂರ್ತಿ ವೈಜ್ಞಾನಿಕ ಶಿಕ್ಷಣ ಎಂದರೇನು ? ಎಂಬುವರ ಬಗ್ಗೆ ಮಾತನಾಡಿದರು. 9-9-1984 ರಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಸಮಿತಿಯ ಅಧ್ಯಕ್ಷರಾದ ಪಿ. ರಾಮಚಂದ್ರರಾವ್ ವಿದ್ಯಾರ್ಥಿ ಮತ್ತು ರಾಜಕೀಯ ಎಂಬ ವಿಷಯವಾಗಿ ಮಾತನಾಡಿದರು. ಮತ್ತು ಭೀಮಸೇನಾಚಾರ್ ವಾಸವಿ ಪ್ರಾಢಶಾಲೆಯ ಹೆಡ್ ಮಾಸ್ಟರ್ ಹೊಸಪೇಟೆ, ಇವರು ಪ್ರಸಕ್ತ ಸಮಾಜದ ಸಮಸ್ಯೆಗಳು ಮತ್ತು ವಿದ್ಯಾರ್ಥಿಗಳ ಪಾತ್ರ ಎಂಬ ವಿಷಯವಾಗಿ ಮಾತನಾಡಿದರು ಪ್ರೊ. ಎಸ್. ಬಾಲರಾಜ್ ಶುಭಾಶಯವನ್ನು ಕೋರಿದರು. ಎಸ್.ಯು. ಜೆ.ಯುವಿ.ಜೆ. ಕಾಲೇಜು ಮತ್ತು ಎಚ್‌ಪಿಎಸ್‌ಜೂ ಕಾಲೇಜ್ ಹಾಗೂ ಎ.ಡಿ.ಬಿ.ಎಫ್.ಜಿ. ಕಾಲೇಜ್‌ಗಳಲ್ಲಿ ಕಾಲೇಜ್ ಕಮಿಟಿಗಳನ್ನು ರಚಿಸಲಾಯಿತು.

○

(1ನೇ ಪುಟದಿಂದ)

ದೆಂಬ ಪೂರ್ಣ ಅರಿವು ಎನ್‌ಟಿಆರ್ ಬೆಂಬಲಿಗರಾದ ಶಾಸಕರಿಗಿದೆಂದು ನಾವು ಭಾವಿಸುತ್ತೇವೆ. ಅವರಲ್ಲಿ ಕೆಲವರು ಕಾಂಗ್ರೆಸ್ ತಂತ್ರದಲ್ಲಿ ಸಿಕ್ಕಿಕೊಂಡರೆ ಭಾರತದ ಜನತೆ, ಭಾರತದ ಚರಿತ್ರೆ ಅವರನ್ನು ಕ್ಷಮಿಸಲಾರದು, ಅವರನ್ನು ರಕ್ಷಿಸಲಾರದೆಂದು ಎಚ್ಚರಿಸಲು ಬಯಸುತ್ತೇವೆ.

ಪ್ರಜಾಪ್ರಭುತ್ವದ ಕೊಲೆ ಮಾಡಿದರೆ ರೊಚ್ಚಿಗೆದ್ದ ಜನತೆ ತನ್ನ ಸಮಾಧಿ ಮಾಡುತ್ತದೆಂದು ಇಂದಿರಾ ಗಾಂಧಿಗೆ ತಿಳಿದಿರಬೇಕು. 1977, 1980 ಅಲ್ಲ. 1980-1984 ಅಲ್ಲವೆಂಬುದನ್ನು ತಡವಾಗಿಯಾದರೂ ಕಾಂಗ್ರೆಸ್ ಮುಖಂಡರು ತಿಳಿದುಕೊಳ್ಳಲು ಪ್ರಯತ್ನ ಮಾಡುವುದಗತ್ಯ.

ಆಂಧ್ರದ ಹೋರಾಟದಿಂದಾಗಿ ಜನಶಕ್ತಿ ಗೆದ್ದಿದೆ. ಎನ್.ಟಿ. ರಾಮರಾವ್ ಮತ್ತು ಅವರ ಮುಖಂಡರು ಇದನ್ನು ಮನವರಿಕೆ ಮಾಡಿರಬೇಕು. ನಮ್ಮೆಲ್ಲರ ಐಕ್ಯತೆಯಿಂದಾಗಿ ಜನರಲ್ಲಿ ಅಪಾರ ವಿಶ್ವಾಸ ಉಂಟು ಮಾಡಿ ಸರ್ವಾಧಿಕಾರಿಯ ಕುಟಿಲ ತಂತ್ರದ ವಿರುದ್ಧ ಅತ್ಯಂತ ಪರಿಣಾಮಕಾರಿ ಚಳುವಳಿ ನಡೆಸಿ ಅಪ್ರತಿಮ ಜಯಗಳಿಸಲು ಸಾಧ್ಯವಾಗಿದೆಂಬುದನ್ನು ವಿರೋಧ ಪಕ್ಷಗಳು ಮನದಟ್ಟು ಮಾಡಿಕೊಳ್ಳಬೇಕು.

ಜನತೆ ಅದನ್ನೇ ಅಪೇಕ್ಷಿಸುತ್ತಿದೆ. ಐಕ್ಯತೆಯ ಹೋರಾಟ ಮುಂದುವರಿಯಲಿ. ಪ್ರಜಾಪ್ರಭುತ್ವದ ರಕ್ಷಣೆಯಾಗಲಿ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಬಲಗೊಳ್ಳಲಿ, ಎಡ ಪಕ್ಷಗಳ ಬದಲಿ ಕಾರ್ಯಕ್ರಮ ಜನಬೆಂಬಲ ಪಡೆಯಲಿ, ದುಡಿಯುವ ಜನರ, ರೈತ-ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕಾಗಿ ನಿರಂತರ ಹೋರಾಟ ನಡೆಯಲಿ.

ಸರ್ವರಿಗೂ ಶಿಕ್ಷಣ; ಸರ್ವರಿಗೂ ಉದ್ಯೋಗ ಚಳುವಳಿ

ಕೋಲಾರ ಜಿಲ್ಲೆಯಾದ್ಯಂತ ಜನಜಾಗೃತಿ ಸಪ್ತಾಹ

ದಿನಾಂಕ : 6-9-84 ರಂದು ಚಿಂತಾಮಣಿಯಲ್ಲಿ ಸಾಯಂಕಾಲ 7 ಗಂಟೆಯಿಂದ 11 ಗಂಟೆಯವರೆಗೂ ಬೀದಿ ಬದಿಯ ಸಭೆಗಳನ್ನು 7 ಕಡೆಗಳಲ್ಲಿ ಮಾಡಲಾಯಿತು. ಬೀದಿ ಬದಿಯ ಸಭೆಯಲ್ಲಿ ಕ್ರಾಂತಿಗೀತೆಗಳನ್ನು ಹಾಡುವುದು ನಂತರ ಸೆಪ್ಟೆಂಬರ್ 15ರ ಕಾರ್ಯಕ್ರಮವಾದ "ಸರ್ವರಿಗೂ ಶಿಕ್ಷಣ-ಸರ್ವರಿಗೂ ಉದ್ಯೋಗ" ದ ವಿಷಯದ ಬಗ್ಗೆ ಜನತೆಗೆ ವಿವರಣೆ ನೀಡಲಾಯಿತು.

ದಿನಾಂಕ : 8-9-84 ರಂದು ದಿಬ್ಬೂರ ಹಳ್ಳಿಯಲ್ಲಿ (ಶಿಡ್ಲಘಟ್ಟ ತಾಲ್ಲೂಕ್) ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ಜಿಲ್ಲಾ ಎಸ್. ಎಫ್. ಐ ನ ಕಾರ್ಯದರ್ಶಿ ಕಾಂ. ಜಿ. ಸಿ. ಬಯ್ಯಾರೆಡ್ಡಿ, ಡಿ. ವೈ. ಎಫ್. ಐ. ಜಿಲ್ಲಾ ಸಂಚಾಲಕ ಕಾಂ ಕೆ. ವಿ. ಸತ್ಯ ನಾರಾಯಣ ಹಾಗೂ ಎಸ್ ಎಫ್ ಐ ನ ಸಂಸ್ಥಾಪಕ ಸದಸ್ಯ ಕಾಂ. ಜಿ. ವಿ. ಶ್ರೀ ರಾಮರೆಡ್ಡಿಯವರು ಭಾಷಣ ಮಾಡಿದರು. ಈ ಸಭೆಯಲ್ಲಿ ಸುಮಾರು 300 ಜನ ಸಾರ್ವಜನಿಕರು ಭಾಗವಹಿಸಿದ್ದರು. ದಿ. 8-9-84 ರಂದು ಚಿಂತಾಮಣಿ ತಾಲೂಕು ಯಗವಕೋಟೆಯ ಹೈಸ್ಕೂಲ್‌ನಲ್ಲಿ "ವಿಚಾರ ಸಂಕಿರಣ" ಏರ್ಪಡಿಸಲಾಗಿತ್ತು. ಈ ವಿಚಾರ ಸಂಕಿರಣದಲ್ಲಿ ಎಸ್ ಎಫ್ ಐ ನ ಜಿಲ್ಲಾ ಅಧ್ಯಕ್ಷ ಟಿ ಎನ್ ಶಿವಾರೆಡ್ಡಿ ಡಿ ವೈ ಎಫ್ ಐ ನ ತಾಲೂಕು ಸಂಚಾಲಕ ಕೆ ವಿ ಎಂ ಸ್ವಾಮಿಯವರು ವಿಷಯದ ಬಗ್ಗೆ ವಿವರಣೆ ನೀಡಿದರು. ಈ ಸಭೆಯಲ್ಲಿ ಶಾಲಾ ಉಪಾಧ್ಯಾಯರು ಮಾತನಾಡಿ ಎಸ್ ಎಫ್ ಐ ಗೆ ಹೆಚ್ಚಿನ ಉತ್ತೇಜನ ನೀಡಿದರು.

8-9-84 ರಂದೇ ಭಾಗೇಪಲ್ಲಿಯಲ್ಲಿ ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ಈ ವಿಚಾರ ಸಂಕಿರಣದಲ್ಲಿ ಎಸ್ ಎಫ್ ಐ ನ ರಾಜ್ಯ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ಹಾಗೂ ಗೌರಿಬಿದನೂರು ನ್ಯಾಷನಲ್ ಕಾಲೇಜು ಕನ್ನಡ ಉಪನ್ಯಾಸಕರಾದ ರಮೇಶರವರು ಹಾಗೂ ಬಾಗೇಪಲ್ಲಿಯ ಜೂನಿಯರ್ ಕಾಲೇಜ್ ಪ್ರಾಂಶುಪಾಲರಾದ ಕೆ. ನಾರಾಯಣ ಸ್ವಾಮಿಯವರು ಭಾಗವಹಿಸಿದ್ದರು.

ದಿನಾಂಕ : 9-9-84 ರಂದು ಚಿಂತಾಮಣಿಯಲ್ಲಿ ಮಧ್ಯಾಹ್ನ 2 ಗಂಟೆಯಿಂದ ಸಂಜೆ 8 ಗಂಟೆಯವರೆಗೂ ಬೀದಿ ಬದಿಯ ಸಭೆಗಳನ್ನು ಮಾಡಲಾಯಿತು. ಒಟ್ಟು ಆರು ಕಡೆ ಸಭೆ ಮಾಡಲಾಯಿತು. ದಿನಾಂಕ 10 ರಂದು ಶಿಡ್ಲಘಟ್ಟದಲ್ಲಿ ಬೀದಿ ಬದಿಯ ಸಭೆಗಳನ್ನು 7 ಕಡೆ ಮಾಡಲಾಯಿತು. ಇದೆ ದಿನ ರಾತ್ರಿ ಮಲ್ಲೂರು(ಶಿಡ್ಲಘಟ್ಟ ತಾಲೂಕ್)ನಲ್ಲಿ ಬಹಿರಂಗ ಸಭೆ ಏರ್ಪಡಿಸಲಾಯಿತು. ಈ ಸಭೆಯಲ್ಲಿ ಜಿ ಸಿ ಬಯ್ಯಾರೆಡ್ಡಿಯವರು ಎಸ್ ಎಫ್ ಐ ನ ಚಾರಿತ್ರಿಕ ಹಿನ್ನೆಲೆ ಹಾಗು ಈಗಿನ ವಿದ್ಯಾರ್ಥಿಗಳ ಕರ್ತವ್ಯದ ಬಗ್ಗೆ ವಿವರಣೆ ನೀಡಿದರು ಡಿ ವೈ ಎಫ್ ಐ ನ ಕೆ ವಿ ಸತ್ಯನಾರಾಯಣರವರು ಡಿ ವೈ ಎಫ್ ಐ ನ ಚಾರಿತ್ರಿಕ ಹಿನ್ನೆಲೆಯ ಬಗ್ಗೆ ಹಾಗೂ ಯುವಜನ ಕರ್ತವ್ಯವನ್ನು ಒತ್ತಿ ಹೇಳಿದರು ನಂತರ ಡಿವೈಎಫ್‌ಐನ ಚಿಂತಾಮಣಿ ತಾಲೂಕ್ ಸಂಚಾಲಕ ಸಿ ವಿ ಎಂ ಸ್ವಾಮಿಯವರು "ಸರ್ವರಿಗೂ ಶಿಕ್ಷಣ" ಸರ್ವರಿಗೂ ಉದ್ಯೋಗ' ವಿಷಯದ ಬಗ್ಗೆ ಹೆಚ್ಚಿನ ವಿವರಣೆ ನೀಡಿದರು.

ದಿನಾಂಕ : 11 ರಂದು ಕುಂದಲಗುರ್ಕಿಯಲ್ಲಿ ವಿಚಾರ ಸಂಕಿರಣ. ಈ ವಿಚಾರ ಸಂಕಿರಣದಲ್ಲಿ ಜಿ ಸಿ ಬಯ್ಯಾರೆಡ್ಡಿ, ಸಿ ವಿ ಎಂ ಸ್ವಾಮಿಯವರು ಹಾಜರಾಗಿದ್ದರು.

ದಿನಾಂಕ : 13 ರಂದು ಶ್ರೀನಿವಾಸಪುರದಲ್ಲಿ ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ಇದರಲ್ಲಿ ಸಿವಿಎಂ ಸ್ವಾಮಿ ಹಾಗೂ ಗೌನಪಲ್ಲಿ ಪ್ರೌಢ ಶಾಲಾ ಉಪಾಧ್ಯಾಯರಾದ ರಘುರವರು ಭಾಗವಹಿಸಿದ್ದರು ಹಾಗೂ ಶ್ರೀನಿವಾಸಪುರ ತಾಲ್ಲೂಕ್ ಡಿ ವೈ ಎಫ್ ಐ ನ ಸಂಚಾಲಕ ನಾಗರಾಜ್‌ರವರು ಭಾಗವಹಿಸಿದ್ದರು. ದಿನಾಂಕ : 13 ರಂದೇ ಕೈವಾರದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ಕೆನರಾ ಬ್ಯಾಂಕಿನ ಶಿವಾನಂದ, ಜಿ.ಸಿ. ಬಯ್ಯಾರೆಡ್ಡಿ ಕೆ. ವಿ. ಸತ್ಯ ನಾರಾಯಣ ಭಾಗವಹಿಸಿದ್ದರು.

ದಿನಾಂಕ : 14 ರಂದು ಬಟ್ಲಹಳ್ಳಿಯಲ್ಲಿ ಬಹಿರಂಗ ಸಭೆ ಏರ್ಪಡಿಸಲಾಗಿತ್ತು. ಈ ಸಭೆಗೆ ಎಸ್ ಎಫ್ ಐ ನ ಜಿಲ್ಲಾ ಅಧ್ಯಕ್ಷ ಕಾಂ. ಟಿ ನ್ ಶಿವಾರೆಡ್ಡಿ ಡಿ ವೈ ಎಫ್ ಐ ನ ಜಿಲ್ಲಾ ಸಂಚಾಲಕ ಕೆ ವಿ ಸತ್ಯ ನಾರಾಯಣರವರು ಭಾಗವಹಿಸಿ ವಿಷದ ಬಗ್ಗೆ ಮಾತನಾಡಿದರು. ಈ ಸಭೆಯಲ್ಲಿ ಸುಮಾರು 400 ಜನ ಸಾರ್ವಜನಿಕರು ಸೇರಿದ್ದರು.

ದಿನಾಂಕ : 15 ರಂದು ಕೋಲಾರ ಜಿಲ್ಲೆಯ ನಾಲ್ಕು ತಾಲೂಕ್‌ಗಳಲ್ಲಿ ಅಂದರೆ ಚಿಂತಾಮಣಿ, ಬಾಗೇಪಲ್ಲಿ, ಶ್ರೀನಿವಾಸಪುರ, ಶಿಡ್ಲಘಟ್ಟಗಳಲ್ಲಿ ಧರಣಿ ಸತ್ಯಾಗ್ರಹ ಯಶಸ್ವಿ ರೀತಿಯಲ್ಲಿ ನಡೆಯಿತು.

ಚಿಲ್ಲರೆ ಹಣದ ಅಭಾವ

(3ನೇ ಪುಟದಿಂದ)

ಕೊರತೆಯಿತೆ. ಕೆಲವು ಕಾಲ ನಾಣ್ಯಗಳ ಉತ್ಪಾದನೆಗೆ ಬಳಸಿದ ಲೋಹಗಳ (ನಿಕ್ಕಲ್, ಬೆಳ್ಳಿ, ತಾಮ್ರ, ಹಿತ್ತಾಳೆ) ಬೆಲೆ ನಾಣ್ಯದ ಬೆಲೆಗಿಂತಲೂ ಹೆಚ್ಚಾಗಿ ದಳ್ಳಾಳಿಗಳು ಅಂತಹ ನಾಣ್ಯಗಳನ್ನು ಅಕ್ರಮವಾಗಿ ಸಂಗ್ರಹಿಸಿ ಅವುಗಳನ್ನು ಕರಗಿಸಿ ಮಾರಲು ತೊಡಗಿದರು, ಅದರಲ್ಲಿಯೂ ಲಾಭಗಿಟ್ಟಿಸತೊಡಗಿದರು !

ಲಾಭ, ಹಣಗಳಿಕೆಯೇ ಬಂಡವಾಳಶಾಹಿ ಸಮಾಜದಲ್ಲಿ ಸರ್ವ ಶ್ರೇಷ್ಠ. ಪರಿಶ್ರಮ ಎಂದು ಪರಿಗಣಿಸಿರುವುದರಿಂದ, ಹಣಗಳಿಕೆಯಿಂದ ಎಲ್ಲಾ ಸುಖ ಸೌಲಭ್ಯಗಳನ್ನೂ ಅಧಿಕಾರ ಪದವಿಗಳನ್ನೂ ಪಡೆಯಬಹುದಾದರಿಂದ ಶ್ರೀಸಾಮಾನ್ಯರ, ದುಡಿಯುವ ಜನರ ಸಮಸ್ಯೆಗಳನ್ನು ಯಾರು ಪರಿಹರಿಸಿಯಾರು ? ಇಂದಿರಾ ಕಾಂಗ್ರೆಸ್ ಸರಕಾರ ಜನರ ಯಾವ ಸಮಸ್ಯೆಗಳನ್ನೂ ಬಗೆಹರಿಸಲಾರದು. ಅವರ ಸಮಸ್ಯೆಗಳಿಂದ ಲಾಭ ಪಡೆದು ಅಧಿಕಾರದಲ್ಲಿ ಮುಂದುವರಿಯುವುದೊಂದೇ ಅದರ ಗುರಿ ! ಸಂಕುಚಿತ ಹಾಗೂ ಜಾಗೃತ ಜನತೆ ಮಾತ್ರ, ಇಂತಹ ಅನ್ಯಾಯ ಶೋಷಣೆಯನ್ನು ಎದುರಿಸಬಲ್ಲದು.

★

ಡಿ. ವೈ. ಎಫ್. ಐ. ಘಟಕ ಸ್ಥಾಪನೆ

ಶ್ರೀರಾಮಪುರಂ ಸ್ಥಳೀಯ ಸಮಿತಿಯ ಅಧ್ಯಕ್ಷರಾದ ಕಾ|| ಶ್ರೀನಿವಾಸ್‌ರವರ ಅಧ್ಯಕ್ಷತೆಯಲ್ಲಿ ಹಾಗೂ ರಾಜ್ಯ ಸಮಿತಿಯ ಸದಸ್ಯರಾದ ಕಾ|| ಆರ್. ಗುರುಸ್ವಾಮಿ ಮತ್ತು ಜಿ. ಕೃಷ್ಣಮೂರ್ತಿ, ಎನ್. ಕೆ. ಮೂರ್ತಿ ಇವರುಗಳ ಸಮ್ಮುಖದಲ್ಲಿ ಡಿ. ವೈ. ಎಫ್. ಐ. ಘಟಕವನ್ನು ಸಾಯಿಬಾಬ ನಗರದಲ್ಲಿ ಸ್ಥಾಪನೆ ಮಾಡಲಾಯಿತು. ಈ ಘಟಕದ ಸಂಚಾಲಕರನ್ನಾಗಿ ಕಾ|| ಸಂತೀಲ್ ವೇಲ್ ಮತ್ತು ಸಹ ಸಂಚಾಲಕರನ್ನಾಗಿ ಕಾ|| ರವಿ ಇವರುಗಳನ್ನು ಆಯ್ಕೆ ಮಾಡಲಾಯಿತು.

Printed & Published by p. Ramachandra Rao by him on behalf of the Communist party of India (Marxist) Karnataka State Committee, K. V. Temple Street, Sultanpet, Bangalore-560053 Editoral and managerial office, L-56, K V. Temple Street. Sultanpet. B 53 Phone : 24514
Editor : P. Ramachandra Rao Managing Editor : N. K. Upadhyaya